# ಸಮಾಜ ಕಲ್ಯಾಣ ಇಲಾಖೆ

**ದಿನಾಂಕ: 26.05.2015 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ - 2013 ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್‌ನ ಸಭೆಯ ನಡವಳಿಗಳು**

ಸ್ಥಳ: ಕೊಠಡಿ ಸಂಖ್ಯೆ : 334, 3ನೇ ಮಹಡಿ,
ಸಮ್ಮೇಳನ ಸಭಾಂಗಣ
ವಿಧಾನಸೌಧ, ಬೆಂಗಳೂರು

ಸಮಯ : ಬೆಳಿಗ್ಗೆ 11.00 ಗಂಟೆಗೆ

**ಸಭೆಗೆ ಹಾಜರಾದ ಸದಸ್ಯರುಗಳು, ಮತ್ತು ಅಧಿಕಾರಿಗಳ ವಿವರ:-**

| | | |
|---|---|---|
| 1. | ಶ್ರೀ. ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು | ಅಧ್ಯಕ್ಷರು |
| 2 | ಶ್ರೀ. ಹೆಚ್. ಆಂಜನೇಯ<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | ಸದಸ್ಯರು |
| 3 | ಶ್ರೀ. ಆರ್. ವಿ. ದೇಶಪಾಂಡೆ,<br>ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು | ಸದಸ್ಯರು |
| 4 | ಶ್ರೀ. ಟಿ.ಬಿ. ಜಯಚಂದ್ರ<br>ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನೆ ಮತ್ತು ಮುಜರಾಯಿ ಸಚಿವರು | ಸದಸ್ಯರು |
| 5 | ಶ್ರೀ. ಹೆಚ್.ಕೆ. ಪಾಟೀಲ್,<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 6 | ಡಾ॥ ಹೆಚ್.ಸಿ. ಮಹಾದೇವಪ್ಪ,<br>ಮಾನ್ಯ ಲೋಕೋಪಯೋಗಿ ಸಚಿವರು | ವಿಶೇಷ ಆಹ್ವಾನಿತರು |
| 7 | ಶ್ರೀ. ರೋಶನ್ ಬೇಗ್,<br>ಮಾನ್ಯ ವಾರ್ತಾ ಮತ್ತು ಮೂಲಭೂತ ಸೌಕರ್ಯಗಳ ಸಚಿವರು | ವಿಶೇಷ ಆಹ್ವಾನಿತರು |
| 8 | ಶ್ರೀ. ಧ್ರುವನಾರಾಯಣ್,<br>ಮಾನ್ಯ ಲೋಕಸಭಾ ಸದಸ್ಯರು | ಸದಸ್ಯರು |
| 9 | ಶ್ರೀ. ಕೆ.ಎನ್. ರಾಜಣ್ಣ,<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 10 | ಶ್ರೀ. ಗೋವಿಂದ ಎಂ ಕಾರಜೋಳ,<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 11 | ಶ್ರೀ. ರಾಜು ಅಲಗೂರು<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 12 | ಡಾ॥ ಉಮೇಶ್ ಜಾದವ್<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |

| | | |
|---|---|---|
| 13 | ಶ್ರೀ. ಐ.ಎಸ್.ಎಸ್. ಪ್ರಸಾದ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 14 | ಶ್ರೀಮತಿ ಎಂ.ವಿ. ಮಂಜುಳ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ | ಸದಸ್ಯರು |
| 15 | ಶ್ರೀ. ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 16 | ಡಾ॥ ಇ. ವೆಂಕಟಯ್ಯ, ಭಾ.ಆ.ಸೇ (ನಿವೃತ್ತ) | ನೋಡಲ್ ಏಜೆನ್ಸಿ ಸಲಹೆಗಾರರು |
| 17 | ಉಪ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು | ವಿಶೇಷ ಆಹ್ವಾನಿತರು. |

1. ಮೊದಲನೆಯದಾಗಿ ಸದಸ್ಯ ಕಾರ್ಯದರ್ಶಿಗಳಾದ ಶ್ರೀ. ಮಂಜುನಾಥ ಪ್ರಸಾದ್, ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಮಾನ್ಯ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ಹಾಗೂ ವಿಶೇಷ ಆಹ್ವಾನಿತರನ್ನು ಹಾಗೂ ಎಲ್ಲರನ್ನು ಸಭೆಗೆ ಆಹ್ವಾನಿಸಿದರು. ಮಾನ್ಯ ಅಧ್ಯಕ್ಷರ ಅನುಮತಿಯ ಮೇರೆಗೆ ಸಭೆ ನಡೆಸಲು ತೀರ್ಮಾನಿಸಲಾಯಿತು.

2. ಮಾನ್ಯ ಸಮಾಜ ಕಲ್ಯಾಣ ಸಚಿವರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸನ್ಮಾನ್ಯ ಮಂತ್ರಿಗಳನ್ನು, ಸದಸ್ಯರುಗಳನ್ನು, ಎಲ್ಲರನ್ನೂ ಮತ್ತೊಮ್ಮೆ ಸ್ವಾಗತಿಸಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಪ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು, ಒಟ್ಟು ಅನುದಾನವನ್ನು ಏಕಗವಾಕ್ಷಿ ಪದ್ಧತಿಯಂತೆ ನೀಡಿದಲ್ಲಿ ಪ್ರತಿಯೊಂದು ಇಲಾಖೆಗಳ ಜೊತೆಯಲ್ಲಿ ಚರ್ಚಿಸಿ ಆಯವ್ಯಯವನ್ನು ಮಂಡಿಸುವ ಮುಂಚೆ ಪರಿಶಿಷ್ಟ ಜಾತಿ/ಪಂಗಡದ ಜನರ ಅಭಿವೃದ್ಧಿಗಾಗಿ ಸಹಾಯವಾಗುವಂತಹ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದು. 2015-16ನೇ ಸಾಲಿನಲ್ಲಿಯೂ ಸಹ ಬಹಳಷ್ಟು ಲೆಕ್ಕಶೀರ್ಷಿಕೆಗಳಲ್ಲಿ ಅನುದಾನವನ್ನು ಒದಗಿಸಲಾಗಿದೆ. ಅಲ್ಲದೇ ಒಂದು ಇಲಾಖೆಗೆ ಒಂದು ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನವನ್ನು ನೀಡಿದಲ್ಲಿ ಸುಲಭವಾಗಿ ಯೋಜನೆಗಳನ್ನು ರಚಿಸಬಹುದು. ಈಗಾಗಲೇ ಕೆಲವು ಇಲಾಖೆಗಳಿಗೆ ಈ ರೀತಿ ಮಾಡಲಾಗಿದೆಯೆಂದು ಪ್ರಸ್ತಾಪಿಸಿದರು. ಮಹಾರಾಷ್ಟ್ರದ ರಾಜ್ಯದ ಮಾದರಿಯಲ್ಲಿ ಮಾಡಬಹುದು. ನೋಡಲ್ ಏಜೆನ್ಸಿಯಲ್ಲಿಯೂ ಸಹ ಇದೇ ರೀತಿ ಮಾಡಬೇಕೆಂದು ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

3. 2014-15ನೇ ಸಾಲಿನಲ್ಲಿ ವಿವಿಧ ಇಲಾಖೆಗಳು ಸಾಧಿಸಿದ ಪ್ರಗತಿಯ ಬಗ್ಗೆ ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಈ ಎರಡು ಉಪ ಯೋಜನೆಗಳಡಿಯಲ್ಲಿ ಸಾಧಿಸಿದ ಪ್ರಗತಿಯ ಸಾರಾಂಶ, ಖರ್ಚಾಗದೆ ಉಳಿದಿರುವ ಪ್ರಮುಖ ಇಲಾಖೆಗಳ ವಿವರ ಹಾಗೂ ಪ್ರತಿಯೊಂದು ಇಲಾಖೆಯು ಸಾಧಿಸಿದ ಪ್ರಗತಿಯನ್ನು ಪ್ರತ್ಯೇಕವಾಗಿ **Power Point Presentation** ಮೂಲಕ ಸಭೆಗೆ ವಿವರಿಸಿದರು.

## ಸಾರಾಂಶ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ನಿಗದಿಪಡಿಸಿದ ಅನುದಾನ | ಬಿಡುಗಡೆ | ಖರ್ಚು | ನಿಗದಿಗೆ ಶೇಕಡ | ಬಿಡುಗಡೆಗೆ ಶೇಕಡ | ವೆಚ್ಚವಾಗದೆ ಇರುವ ಅನುದಾನ |
|---|---|---|---|---|---|---|
| **SCSP** | 11966.00 | 10383.03 | 9707.90 | 81% | 93% | 2258.10 |
| **TSP** | 4356.93 | 3808.53 | 3537.60 | 81% | 93% | 819.33 |
| **ಒಟ್ಟು** | 16322.93 | 14191.56 | 13245.50 | 81% | 93% | 3077.43 |

2014-15ನೇ ಸಾಲಿನಲ್ಲಿ **SCSP** ಉಪ ಯೋಜನೆಯಡಿಯಲ್ಲಿ **ರೂ.11518.99 ಕೋಟಿಗಳನ್ನು** ನಿಗದಿಪಡಿಸಿದ್ದು, ನಂತರ ಕೆಲವು ಇಲಾಖೆಗಳಿಗೆ ಹೆಚ್ಚುವರಿಯಾಗಿ ಅನುದಾನ ನೀಡಿದ್ದು, **ಒಟ್ಟು ರೂ.11966.00 ಕೋಟಿಗಳು, ಅದರಲ್ಲಿ ರೂ.9707.90 ಕೋಟಿಗಳನ್ನು ಖರ್ಚಾಗಿ, 81% ಸಾಧನೆಯಾಗಿರುತ್ತದೆ**. ಬಿಡುಗಡೆ ಮಾಡಿದ **ರೂ.10383.03 ಕೋಟಿಗಳಿಗೆ ಹೋಲಿಸಿದಾಗ ಖರ್ಚಾದ ಮೊತ್ತ 93% ಪ್ರತಿಶತವಾಗಿರುತ್ತದೆ. ಅದೇ ರೀತಿ TSP ಅಡಿಯಲ್ಲಿ ರೂ.4356.93 ಕೋಟಿಗಳನ್ನು ಒದಗಿಸಿದ್ದು ಅದರಲ್ಲಿ ರೂ.3537.60 ಕೋಟಿಗಳು ಖರ್ಚಾಗಿ, 81% ಸಾಧನೆಯಾಗಿರುತ್ತದೆ**. ಬಿಡುಗಡೆ ಮಾಡಿದ **ರೂ.3808.53 ಕೋಟಿಗಳಿಗೆ ಹೋಲಿಸಿದಾಗ ಖರ್ಚಾದ ಮೊತ್ತ 93% ಪ್ರತಿಶತವಾಗಿರುತ್ತದೆ**

2014-15ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ 2015-16ನೇ ಸಾಲಿನ ಕ್ರಿಯಾ ಯೋಜನೆಗಳ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ, ಪರಿಷತ್ತಿನ ಸದಸ್ಯರುಗಳನ್ನು ಸೇರಿಸಿಕೊಂಡು ಎರಡು ಬಾರಿ ಸಭೆಗಳನ್ನು ನಡೆಸಿ ಸಾಧಿಸಿದ ಪ್ರಗತಿಯನ್ನು ಮತ್ತು ವಿವಿಧ ಯೋಜನೆಗಳನ್ನು ರೂಪಿಸುವ ಬಗ್ಗೆ ಇತ್ಯಾದಿ ಪರಿಶೀಲಿಸಲಾಗಿದೆಯೆಂದು ಸಹ ತಿಳಿಸಿದರು. 2014-15 ನೇ ಸಾಲಿನಲ್ಲಿ ಪ.ಜಾ.ಉ.ಯೋ.ಅಡಿಯಲ್ಲಿ **ಒಟ್ಟು ರೂ.2258.00 ಕೋಟಿಗಳು** ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ **ರೂ.819.00 ಕೋಟಿಗಳು** ಖರ್ಚಾಗಿರುವುದಿಲ್ಲ. ಮಾರ್ಚ್ ಅಂತ್ಯದಲ್ಲಿ ಕೆಲವು ಇಲಾಖೆಗಳಿಗೆ ಅನುದಾನ ಬಿಡುಗಡೆ ಆಗಿದ್ದರೂ ಖರ್ಚು ಮಾಡಲು ಸಾಧ್ಯವಿಲ್ಲ ಎಂಬ ಕಾರಣಗಳಿಂದ ಅನುದಾನ ಉಳಿದಿದೆ ಎಂದು ಇಲಾಖೆಗಳು ವರದಿ ಮಾಡಿದ್ದಾರೆಂದು ತಿಳಿಸಿದರು. ವಿವಿಧ ಇಲಾಖೆಗಳ ವಿವರಗಳನ್ನು ಸಹ ಒದಗಿಸಲಾಗಿದೆ.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಮಾತನಾಡಿ, ಭಾರತ ಸರ್ಕಾರದ ವತಿಯಿಂದ ಕೆಲವು ಇಲಾಖೆಗಳಿಗೆ ಅಂದರೆ, ತೋಟಗಾರಿಕೆ ಇಲಾಖೆ (NHM) ಉನ್ನತ ಶಿಕ್ಷಣ (RUSA), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ (SSA/ICT), ಆರೋಗ್ಯ ಇಲಾಖೆ (NRHM.), ಜಲಾನಯನ ಅಭಿವೃದ್ಧಿ ಇಲಾಖೆ (IWMP.), ಇತ್ಯಾದಿ ಇಲಾಖೆಗಳಿಗೆ ಅನುದಾನ ಬಿಡುಗಡೆಯಾಗಿಲ್ಲದ ಕಾರಣ ಅನುದಾನ ಉಳಿಕೆಯಾಗಿದೆ ಎಂದು ತಿಳಿಸಿದರು.

4. ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಮಾತನಾಡಿ, ಪ್ರವಾಸೋದ್ಯಮ ಇಲಾಖೆಗೆ 2015-16ನೇ ಸಾಲಿನಲ್ಲಿ ಎರಡು ಉಪ ಯೋಜನೆಗಳಡಿಯಲ್ಲಿ ರೂ.12.00 ಕೋಟಿಗಳನ್ನು ಮಾತ್ರ ನೀಡಿದ್ದು, ಹಿಂದಿನ ವರ್ಷ ಸುಮಾರು ರೂ.36.00 ಕೋಟಿ ನೀಡಿರುತ್ತಾರೆ. ಪ್ರಸ್ತುತ ವರ್ಷದಲ್ಲಿ ಬಹಳ ಕಡಿಮೆ ಅನುದಾನ ನೀಡಿದ್ದು, ಒಟ್ಟು ಬೇಡಿಕೆಗೆ ಅನುಗುಣವಾಗಿರುವುದಿಲ್ಲ. ಸಹಾಯಧನದಲ್ಲಿ ಪ್ರವಾಸಿ ಟ್ಯಾಕ್ಸಿಗಳಿಗೆ ಬಹಳಷ್ಟು ಬೇಡಿಕೆ ಇದ್ದು, ಈ ವರ್ಷ ಕೇವಲ 480 ಟ್ಯಾಕ್ಸಿಗಳನ್ನು ಮಾತ್ರ ನೀಡಲು ಸಾಧ್ಯವಾಗುತ್ತದೆ. ಇದೊಂದು ಒಳ್ಳೆಯ ಕಾರ್ಯಕ್ರಮ ಮತ್ತು ನೇರವಾಗಿ ಪ.ಜಾತಿ/ಪ.ಪಂಗಡದ ಫಲಾನುಭವಿಗಳಿಗೆ ನೇರವಾಗಿ ಪ್ರಯೋಜನವಾಗುವ ಕಾರ್ಯಕ್ರಮವಾದ್ದರಿಂದ ಹೆಚ್ಚಿನ ಅನುದಾನ ನೀಡಬೇಕೆಂದು ಒತ್ತಾಯಿಸಿದರು. ಅಲ್ಲದೆ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಹ ಪ್ರಸ್ತುತ ನೀಡಿದ ಅನುದಾನ ಕಡಿಮೆ ಇರುತ್ತದೆ. ಹಿಂದಿನ ವರ್ಷ ರೂ.300.00 ಕೋಟಿಗಳನ್ನು ನೀಡಿದ್ದು, ಈ ವರ್ಷ **ರೂ.149.00 ಕೋಟಿಗಳನ್ನು** ನೀಡಲಾಗಿದೆ.

ಪ್ರಮುಖವಾಗಿ ಪ.ಜಾತಿ / ಪ.ಪಂಗಡ / ಹಿಂದುಳಿದ ವರ್ಗದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ **Gross Enrolment Ratio (GER)** ಅನ್ನು ಹೆಚ್ಚಿಸಲು ಮತ್ತು ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿ, ಗುಣಮಟ್ಟದ ಶಿಕ್ಷಣ ನೀಡಲು **ಹೆಚ್ಚುವರಿಯಾಗಿ ಒಟ್ಟಾರೆ ರೂ.500.00 ಕೋಟಿಗಳನ್ನು ಈ ಕೆಳಕಂಡ ಕಾರ್ಯಕ್ರಮಗಳಿಗೆ ವಿಶೇಷ ಅನುದಾನ ಒದಗಿಸಲು ಕೋರಿದರು.**

1. ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳಿಗೆ ದಾಖಲಿಸುವ ಆಂದೋಲನಕ್ಕಾಗಿ ರೂ.250.00 ಕೋಟಿಗಳು
2. ಪ್ರತಿ ಜಿಲ್ಲೆಗೆ ಕನಿಷ್ಠ 2 ರಂತೆ ಒಟ್ಟು 60 ಮಹಿಳಾ ಪ.ಜಾತಿ / ಪ.ಪಂಗಡದ ಹಾಸ್ಟೆಲ್‌ಗಳನ್ನು ತೆರೆಯಲು ರೂ.120.00 ಕೋಟಿಗಳು
3. ಕಲೆ, ವಾಣಿಜ್ಯ, ವಿಜ್ಞಾನ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜು ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಕೌಶಲ್ಯ ಆಧಾರಿತ ತರಬೇತಿಗಳನ್ನು ನೀಡಲು ರೂ.50.00 ಕೋಟಿಗಳು
4. ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ (**Revolving Fund**) ಗಾಗಿ ರೂ.80.00 ಕೋಟಿಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯವರ ಜನಸಂಖ್ಯೆ ಇತರ ಜಿಲ್ಲೆಗಳಷ್ಟು ಇಲ್ಲದಿದ್ದರೂ ಸಹ, ಗ್ರಾಮಗಳು ದೂರ ದೂರದಲ್ಲಿ ವಿಸ್ತರಿಸಿಕೊಂಡು ಎಲ್ಲಾ ಗ್ರಾಮಗಳಲ್ಲಿ ಸ್ವಲ್ಪಮಟ್ಟಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು ಇರುತ್ತಾರೆ, ಅದಕ್ಕೆ ಉತ್ತರ ಕನ್ನಡ ಜಿಲ್ಲೆಗೆ ಜನಸಂಖ್ಯೆಯ ಅಧಾರದ ಮೇಲೆ ಅಲ್ಲದೆ ಹೆಚ್ಚುವರಿ ಅನುದಾನ ಒದಗಿಸಬೇಕೆಂದು ಪ್ರಸ್ತಾಪಿಸಿದರು.

ಇದೇ ವಿಷಯದಲ್ಲಿ ಶ್ರೀ. ಧ್ರುವನಾರಾಯಣ ಮಾನ್ಯ ಸದಸ್ಯರು ಮಾತನಾಡಿ, ಮೈಸೂರು ವಿಶ್ವವಿದ್ಯಾಲಯವನ್ನು ಉನ್ನತ ಶಿಕ್ಷಣ ಇಲಾಖೆಯ ಪಟ್ಟಿಯಲ್ಲಿ ಸೇರಿಸಿಲ್ಲ, ಹೆಚ್ಚಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿರುವ ಈ ವಿಶ್ವವಿದ್ಯಾಲಯದ ಹೆಸರನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಕೋರಿದಾಗ, ಅದಕ್ಕೆ ಉನ್ನತ ಶಿಕ್ಷಣ ಸಚಿವರು ಸಮ್ಮತಿಸಿದರು.

ವಿವಿಧ ಇಲಾಖೆಗಳಲ್ಲಿ ಖರ್ಚಾಗದೆ ಉಳಿದಿರುವ ಹಣದ ಬಗ್ಗೆ ಮತ್ತು ಅದಕ್ಕೆ ಕಾರಣಗಳನ್ನು ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

5. <u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ</u> :-

ಶ್ರೀ ಕೆ.ಎನ್. ರಾಜಣ್ಣ, ಮಾನ್ಯ ಸದಸ್ಯರು ಮಾತನಾಡಿ, ಬಿಡುಗಡೆಯಾದ ಅನುದಾನದಲ್ಲಿ ರೂ.260.00 ಕೋಟಿಗಳನ್ನು ಖರ್ಚು ಮಾಡದೆ ಇರುವ ಬಗ್ಗೆ ಕಾರಣಗಳನ್ನು ತಿಳಿಸಬೇಕೆಂದು ಪ್ರಶ್ನಿಸಿದರು. ಅದಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಉತ್ತರ ನೀಡುತ್ತಾ, ಹಿಂದಿನ ಸಾಲಿನಲ್ಲಿ ನಾಲ್ಕನೇ ಕಂತಿನ ಅನುದಾನ ಮಾರ್ಚ್ 2015 ರ ಅಂತಿಮ ವಾರದಲ್ಲಿ ಬಿಡುಗಡೆಯಾಗಿರುವುದರಿಂದ ಖರ್ಚು ಮಾಡಲು ಸಾಧ್ಯವಾಗಿರುವುದಿಲ್ಲವೆಂದು ವಿವರಿಸಿದರು ಹಾಗೂ ಅನುದಾನವನ್ನು ಖಜಾನೆಯಿಂದ ಡ್ರಾ ಮಾಡಿ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಲಾಗಿದೆ. ಸದರಿ ಅನುದಾನವನ್ನು 2015-16ನೇ ಸಾಲಿನಲ್ಲಿ ಖರ್ಚು ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಮತ್ತು ಈ ಅನುದಾನ ವ್ಯಪಗತವಾಗುವುದಿಲ್ಲವೆಂದು ತಿಳಿಸಿದರು

ಸದಸ್ಯರಾದ ಶ್ರೀ. ಧ್ರುವನಾರಾಯಣ್ ರವರು ಮಾತನಾಡಿ, ಸದರಿ ಇಲಾಖೆಯಲ್ಲಿ ಅನುಷ್ಠಾನ ಮಾಡುತ್ತಿರುವ ಬಹುತೇಕ ಕಾರ್ಯಕ್ರಮಗಳಿಗೆ ಈ ಎರಡು ಉಪ ಯೋಜನೆಗಳಡಿ ಒದಗಿಸಿದ ಅನುದಾನವನ್ನು ಡೀಮ್ಡ್

ವೆಚ್ಚವಾಗಿ ಭರಿಸಲಾಗುತ್ತಿದೆ ಎಂದು ತಿಳಿಸಿ ಈ ರೀತಿ ಮಾಡುವುದು ಸರಿಯಿಲ್ಲವೆಂದು ವ್ಯಕ್ತಪಡಿಸಿದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರು ಸರಬರಾಜು, ಸ್ವಚ್ಛ ಭಾರತ ಯೋಜನೆ ಹಾಗೂ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಪ.ಜಾತಿ/ಪ.ಪಂಗಡದ ಜನರಿಗೆ ನೇರವಾಗಿ ಮತ್ತು ಆ ಸಮುದಾಯಕ್ಕೆ ಪ್ರಯೋಜನವಾಗುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ವಿವರಿಸಿದರು. ಆದರೆ, ನಮ್ಮ ಗ್ರಾಮ ನಮ್ಮ ರಸ್ತೆ, ಪಂಚಾಯತ್ ರಸ್ತೆಗಳಿಗೆ ನೀಡಿದ ಹಣ, ಪಿ.ಎಂ.ಜಿ.ಎಸ್.ವೈ ಇತ್ಯಾದಿ ಯೋಜನೆಗಳಲ್ಲಿ ಡೀಮ್ಡ್ ವೆಚ್ಚವಾಗಿರುತ್ತದೆ. ಸಮಾಜ ಕಲ್ಯಾಣ ಕಾರ್ಯದರ್ಶಿಗಳು ಮಾತನಾಡಿ, ವಿಭಜಿಸಲಾಗದ ಯೋಜನೆಗಳಿಗೆ ಭಾರತ ಸರ್ಕಾರದ ಮಾರ್ಗದರ್ಶನಗಳಂತೆ ಯೋಜನಾ ಮೊತ್ತದಲ್ಲಿ ಕೇವಲ (ಪ.ಜಾತಿ : 5% ; ಪ.ಪಂಗಡ : 3%) ಒಟ್ಟು 8% ಮಾತ್ರ ಎರಡು ಉಪಯೋಜನೆಗಳಡಿಯಲ್ಲಿ ವೆಚ್ಚ ಭರಿಸಲು ಅವಕಾಶವಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಈ ಎರಡು ಉಪ ಯೋಜನೆಗಳಡಿ ಒದಗಿಸಿದ ಅನುದಾನವನ್ನು ಯಾವುದೇ ಕಾರಣಕ್ಕೂ ವ್ಯಪಗತ ಮಾಡದೆ ಆಯಾ ವರ್ಷದಲ್ಲಿ ಖರ್ಚು ಮಾಡತಕ್ಕದ್ದೆಂದು ಸೂಚಿಸಿದರು. ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅಧಿನಿಯಮವು 2014-15ನೇ ಸಾಲಿನಲ್ಲಿ ಮೊದಲನೇ ವರ್ಷ ಅನುಷ್ಠಾನಕ್ಕೆ ಬಂದಿರುವ ಕಾರಣ, ಈ ವರ್ಷದಲ್ಲಿ ಆಗಿರುವ ಲೋಪಗಳಿಗೆ ವಿನಾಯಿತಿಯನ್ನು ನೀಡಬಹುದೇ ಹೊರತು, ಪ್ರಸಕ್ತ ಸಾಲಿನಲ್ಲಿ ಯಾವುದೇ ಕಾರಣಕ್ಕಾಗಿ ರೀತಿಯ ಲೋಪಗಳು ಮರುಕಳಿಸಬಾರದು, ಹಾಗೇನಾದರು ಲೋಪ ದೋಷಗಳು ಮರುಕಳಿಸಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ಆದಕಾರಣ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸದರಿ ಕಾಯ್ದೆಯ ಬಗ್ಗೆ ಸರಿಯಾಗಿ ಓದಿ ಅರ್ಥೈಸಿಕೊಂಡು, ಈ ಅಧಿನಿಯಮ ಪ್ರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿದರು.

(ಕ್ರಮ:- **ಎಲ್ಲಾ ಇಲಾಖೆಗಳು**)

6. <u>ನಗರಾಭಿವೃದ್ಧಿ ಇಲಾಖೆ:-</u>

ಸರ್ಕಾರದ ಕಾರ್ಯದರ್ಶಿಗಳು ವಿವರ ನೀಡುತ್ತಾ, 2014-15ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಗೆ ಒಟ್ಟು ರೂ.1116.00 ಕೋಟಿ ಅನುದಾನವನ್ನು ಒದಗಿಸಿದ್ದು, ರೂ.581.00 ಕೋಟಿಗಳ ಅನುದಾನ ಖರ್ಚಾಗದೆ ಉಳಿದಿರುತ್ತದೆ ಎಂದು ತಿಳಿಸಿದರು. ಮಾನ್ಯ ಮುಖ್ಯಮಂತ್ರಿಗಳು ನಗರಾಭಿವೃದ್ಧಿ ಇಲಾಖೆಯಲ್ಲಿ ಕೇವಲ 48% ಪ್ರಗತಿಯಾಗಿದೆ, ಇದು ಅತೀ ಕಡಿಮೆ ಪ್ರಗತಿಯೆಂದು ಅಸಮದಾನ ವ್ಯಕ್ತಪಡಿಸಿದರು. ಕಳೆದ ವರ್ಷ ಖರ್ಚು ಮಾಡದೆ ಇರುವ ಅನುದಾನ ಹಾಗೂ ಈ ವರ್ಷ ಖರ್ಚು ಮಾಡಬೇಕಾದ ಅನುದಾನ ಯಾವುದನ್ನೂ ವ್ಯಪಗತ ಮಾಡಬಾರದೆಂದು ತಿಳಿಸಿದರು. ಹಾಗೆ ಮಾಡದಿದ್ದರೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಧ್ರುವನಾರಾಯಣ್ ರವರು ಮಾತನಾಡಿ, ನಗರಾಭಿವೃದ್ಧಿ ಇಲಾಖೆಯಲ್ಲಿ ರಾಜೀವ ಆವಾಜ್ ಯೋಜನೆ ಒಂದೇ ಅಲ್ಲ ಎಲ್ಲಾ ಯೋಜನೆಗಳಲ್ಲೂ ವೆಚ್ಚ ಮಾಡಿಲ್ಲ ಮತ್ತು ಡೀಮ್ಡ್ ವೆಚ್ಚವಾಗಿರುತ್ತದೆ ಎಂದು ಹೇಳಿದರು.

ಶ್ರೀ ಗೋವಿಂದ ಕಾರಜೋಳ, ಮಾನ್ಯ ಸದಸ್ಯರು ಮಾತನಾಡಿ, ಉಳಿದ ಹಣವನ್ನು ವಸತಿ ನಿರ್ಮಾಣಕ್ಕಾಗಿ ಮತ್ತು ಕುಡಿಯುವ ನೀರಿಗಾಗಿ ಉಪಯೋಗಿಸಿದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಶ್ರೀ ರಾಜಣ್ಣ, ಮಾನ್ಯ ಸದಸ್ಯರು ಮಾತನಾಡಿ, ಆರ್.ಎ.ವೈ.ಯೋಜನೆಗೆ ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಿರುವುದರಿಂದ,

ಸದರಿ ಯೋಜನೆಯಡಿಯಲ್ಲಿ ಉಳಿಕೆಯಾಗಿರುವ ಅನುದಾನವನ್ನು ಕೊಳಚೆ ಪ್ರದೇಶದಲ್ಲಿ ವಾಸವಿರುವ ಜನರಿಗೆ ವಸತಿ ನಿರ್ಮಾಣ ಮಾಡಲು ಉಪಯೋಗಿಸುವುದು ಸೂಕ್ತವಾಗಿದೆ ಎಂದು ಸಲಹೆ ನೀಡಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಈ ವರ್ಷ ಡೀಮ್ಡ್ ವೆಚ್ಚಕ್ಕೆ ಅವಕಾಶ ಕೊಡಬಾರದು ಮತ್ತು ನಗರೋತ್ಥಾನ ಯೋಜನೆಯಲ್ಲಿ ಡೀಮ್ಡ್ ವೆಚ್ಚ ಆಗಿದೆ ಈ ತರಹ ಆಗಬಾರದೆಂದು ವ್ಯಕ್ತಪಡಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಸದಸ್ಯರ ಅಭಿಪ್ರಾಯ ಸಮಂಜಸವಾಗಿದೆ. ಆದರೆ, ಅದನ್ನು ಜಾರಿಗೆ ತರಲು ಆಗುತ್ತಿದೆಯೇ ಎಂಬುದನ್ನು ಪರಿಶೀಲನೆ ಮಾಡಬಹುದೆಂದು ತಿಳಿಸಿದರು.

ಇದಕ್ಕೆ ನಗರಾಭಿವೃದ್ಧಿ ಕಾರ್ಯದರ್ಶಿಗಳು ಮಾತನಾಡಿ, ನಗರೋತ್ಥಾನ ಯೋಜನೆಯಡಿಯಲ್ಲಿ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ, ಈ ಹಂತದಲ್ಲಿ ಹಣವನ್ನು ಬೇರೆ ಯೋಜನೆಗಳಿಗೆ ಉಪಯೋಗಿಸಲು ಸಾಧ್ಯವಾಗಿಲ್ಲವೆಂದು ತಿಳಿಸಿದರು. ಒಂದು ವೇಳೆ ಹೆಚ್ಚುವರಿ ಅನುದಾನ ಒದಗಿಸಿದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದು ಎಂದು ತಿಳಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಡೀಮ್ಡ್ ವೆಚ್ಚ ನಿಗಧಿತ 5%ಕ್ಕಿಂತ ಹೆಚ್ಚಾಗಬಾರದೆಂದು ಮತ್ತು ಅದನ್ನು ತಪ್ಪದೆ ಪಾಲಿಸಬೇಕೆಂದು ಸೂಚಿಸಿದರು.

ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ, 2015-16ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆ ಉಪಯೋಜನೆ ಅಡಿಯಲ್ಲಿ ಒದಗಿಸಿದ ಅನುದಾನ ಕಡಿಮೆ ಇದ್ದರಿಂದ, ಈ ವರ್ಷ ಸರಿಯಾಗಿ ಉಪಯೋಗಿಸಬಹುದೆಂದು ಹೇಳಿದರು.

ಶ್ರೀ ಗೋವಿಂದ ಕಾರಜೋಳ ಇವರು ಮಾತನಾಡಿ, ನಗರ ಪ್ರದೇಶಗಳಲ್ಲಿ ಭೂಮಿಯ ಬೆಲೆ ಜಾಸ್ತಿ ಆಗಿದೆ ಅದ್ದರಿಂದ ಮನೆ ಇಲ್ಲದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನರಿಗೆ ನಿವೇಶನವನ್ನು ಸರ್ಕಾರದಿಂದ ಖರೀದಿ ಮಾಡಿ ಒದಗಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ತಿಳಿಸಿದರು. ಅಲ್ಲದೆ, ನಗರ ಪ್ರದೇಶದಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸಲಾಗುತ್ತದೆ ಅದರಲ್ಲಿ ಪ.ಜಾತಿ/ಪ.ಪಂಗಡ ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಒದಗಿಸಬೇಕೆಂದು ಸಹ ತಿಳಿಸಿದರು.

ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು, ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ ಮತ್ತು ಪ.ಜಾತಿ/ಪ.ಪಂಗಡದ ವಸತಿ ರಹಿತರಿಗೆ ಒಂದು ಲಕ್ಷ ಮನೆಗಳನ್ನು ಮತ್ತು ಪಟ್ಟಣಗಳಲ್ಲಿ 50,000 ಮನೆಗಳನ್ನು ಹಾಗೂ ನಿವೇಶನ ರಹಿತರಿಗೆ ಐವತ್ತು ಸಾವಿರ ನಿವೇಶನಗಳನ್ನು ನೀಡಲಾಗುವುದೆಂದು ಆಯವ್ಯದಲ್ಲಿ ಘೋಷಿಸಲಾಗಿದೆ. ಇದರ ಬಗ್ಗೆ ಯೋಜನೆ ರೂಪಿಸಲು ಸೂಚಿಸಿದರು.

ಮಾನ್ಯ ಕಾನೂನು ಸಚಿವರು ಮಾತನಾಡುತ್ತಾ, ಈಗಾಗಲೇ **Land Policy** ಇದೆ. ಪ್ರತಿಯೊಂದು ನಗರ ವ್ಯಾಪ್ತಿಗಳಲ್ಲಿ ಜಮೀನು ಇರುತ್ತದೆ. ಇದನ್ನು ಗುರುತಿಸಿ, ರಾಜೀವ್ ಗಾಂಧಿ ವಸತಿ ನಿಗಮಕ್ಕೆ ನೀಡುವ ಬಗ್ಗೆ ಸ್ಪಷ್ಟ ನಿರ್ದೇಶನ ಕಾಯ್ದೆಯಲ್ಲಿರುತ್ತದೆ. ನಿವೇಶನಕ್ಕಾಗಿ ಜಮೀನನ್ನು ಪಡೆಯಲು ಈ ಹಿಂದೆ ಒಂದು ಕಾಯ್ದೆ ಇದ್ದು, ಅದನ್ನು ಮತ್ತೆ ಜಾರಿಗೆ ತಂದರೆ ಜಮೀನು ಪಡೆಯಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಂದಾಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಾತನಾಡುತ್ತಾ, ಇತ್ತೀಚಿಗೆ **Land Policy** ಅನುಮೋದನೆಯಾಗಿದೆ. ಮತ್ತು ಸರ್ಕಾರದ ವಶದಲ್ಲಿರುವ ಸರ್ಕಾರಿ ಜಮೀನನ್ನು ಬಡವರಿಗೆ ನಿವೇಶನವನ್ನು ಒದಗಿಸಿಕೊಡಲು ಆದ್ಯತೆಯನ್ನು ಸೂಚಿಸಲಾಗಿದೆ. ರಾಜೀವ್ ಗಾಂಧಿ ವಸತಿ ನಿಗಮದಿಂದ ನೀಡಲಾಗುವ ನಿವೇಶನಗಳನ್ನು ಉಚಿತವಾಗಿ ಕೊಡಲು ಪಾಲಿಸಿಯಲ್ಲಿ ಅವಕಾಶ ಕಲ್ಪಿಸಿದ್ದೇವೆ ಎಂದು ತಿಳಿಸಿದರು.

ಮಾನ್ಯ ಕಾನೂನು ಸಚಿವರು ಸಿ.ಎ. ನಿವೇಶನಗಳಲ್ಲಿ ಸರ್ಕಾರಿ ಉದ್ದೇಶಕ್ಕೆ ವಿದ್ಯಾರ್ಥಿನಿಲಯದ ನಿರ್ಮಾಣಕ್ಕೆ ನೀಡಲು ಯಾವುದೇ ತೊಂದರೆಯಿರುವುದಿಲ್ಲವೆಂದು ಹೇಳಿದರು.

ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮಾತನಾಡಿ ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನು ಖರೀದಿ ಮಾಡಿ, ಒದಗಿಸಲು ಯಾವುದೇ ಅಡಚಣೆಯಿರುವುದಿಲ್ಲವೆಂದು ಆದರೆ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುದಾನದ ಕೊರತೆಯಿದೆಯೆಂದು ತಿಳಿಸಿದರು.

ನೋಡಲ್ ಏಜೆನ್ಸಿ ಸಲಹೆಗಾರರು ಮಾತನಾಡುತ್ತಾ, ಸಿ.ಎ. ನಿವೇಶನಗಳನ್ನು ವಿದ್ಯಾರ್ಥಿ ನಿಲಯದ ಕಟ್ಟಡಗಳಿಗೆ ಶೇಕಡ 50 ರಷ್ಟು ರಿಯಾಯಿತಿ ದರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ನೀಡಬೇಕೆಂದು ಕೋರಿದರು.

ಮಾನ್ಯ ಮುಖ್ಯಮಂತ್ರಿಯವರು ನಗರಾಭಿವೃದ್ಧಿ ಪ್ರಾಧಿಕಾರಗಳು ಸಿ.ಎ ನಿವೇಶನಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಶೀಘ್ರವಾಗಿ ಮಂಜೂರು ಮಾಡುವಂತೆ ನಿರ್ದೇಶಿಸಿದರು.

ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಮಾತನಾಡಿ ಎಲ್ಲಾ ಇಲಾಖೆಗಳು ಕಡಿಮೆ ಅನುದಾನವನ್ನು ವಿನಿಯೋಗಿಸಿದಂತೆ ಕಂಡು ಬರುತ್ತದೆ. ಕೊಳಚೆ ಪ್ರದೇಶಗಳಲ್ಲಿ ಸುಮಾರು 75 ಪ್ರತಿಶತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರು ಇರುವುದರಿಂದ, ಅವರಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು, ಕರಕುಶಲ ತರಬೇತಿಗಳನ್ನು, ಮತ್ತು ಅವರ ಸರ್ವತೋಮುಖ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

7. <u>ಸಮಾಜ ಕಲ್ಯಾಣ ಇಲಾಖೆ</u>:-

ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳು ಮಾತನಾಡಿ 2014-15ನೇ ಸಾಲಿಗೆ ರೂ.3623.00 ಕೋಟಿಗಳು ನಿಗಧಿಯಾಗಿದ್ದು, ಅದರಲ್ಲಿ ರೂ. 3223.00 ಕೋಟಿಗಳು ಖರ್ಚಾಗಿರುತ್ತದೆ. ಆದರೆ ರೂ.400.00 ಕೋಟಿಗಳು ವೆಚ್ಚವಾಗಿರುವುದಿಲ್ಲ. ಕೇಂದ್ರ ಸರ್ಕಾರದಿಂದ ರೂ.2360.00 ಕೋಟಿಗಳ ಅನುದಾನ ಬಿಡುಗಡೆಯಾಗಿರುವುದಿಲ್ಲ ಮತ್ತು ರೂ.140.00 ಕೋಟಿಗಳು ಮಾರ್ಚ ಅಂತ್ಯದಲ್ಲಿ ಬಿಡುಗಡೆ ಮಾಡಿದರೂ ಸಹ ಖಜಾನೆಯಲ್ಲಿ ನಗದೀಕರಣಗೊಂಡಿರುವುದಿಲ್ಲ, ಇದರಿಂದ ಹಣ ಖರ್ಚಾಗಿರುವುದಿಲ್ಲ.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಒಂದು ವೇಳೆ ಕೇಂದ್ರದ ಪಾಲು ಬಾರದಿದ್ದಲ್ಲಿ, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗಳಿಗೆ ಮಾತ್ರ ಸೀಮಿತಗೊಳಿಸಿ, ರಾಜ್ಯದ ಪಾಲಿನ ಅನುದಾನವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಗೆ ಸೂಕ್ತ ನಿರ್ದೇಶನವನ್ನು ನೀಡಲು ಕೋರಿದರು.

**(ಕ್ರಮ : ಆರ್ಥಿಕ ಇಲಾಖೆ)**

ಶ್ರೀ ರಾಜಣ್ಣ, ಸದಸ್ಯರು, ಮಾತನಾಡುತ್ತಾ, ಪೈಲೆಟ್ ಜಿಲ್ಲೆಗಳಾದ ತುಮಕೂರು, ಮೈಸೂರು, ಧಾರವಾಡ ಜಿಲ್ಲೆಗಳಲ್ಲಿ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಯೋಜನೆಯಡಿಯಲ್ಲಿ 2013-14ನೇ ಸಾಲಿನಲ್ಲಿ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ಈವರೆವಿಗೂ ನೀಡಿರುವುದಿಲ್ಲವೆಂದು ಹಾಗೂ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಈ ಬಗ್ಗೆ ಉತ್ತರಿಸುತ್ತಾ, ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಅವರಿಂದ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಿಲ್ಲ. ಪ್ರಸ್ತುತ

ವರ್ಷ ರಾಜ್ಯ ಸರ್ಕಾರದ ವತಿಯಿಂದಲೇ ಪಾವತಿಸಲು ಸೂಚಿಸಲಾಗಿದೆ. ಅದರಿಂದ, ಯಾವುದೇ ತೊಂದರೆಯಿಲ್ಲದಂತೆ ಶಿಷ್ಯವೇತನವನ್ನು ನೀಡಲಾಗುವುದು ಎಂದು ತಿಳಿಸಿದರು.

ಕೆ.ಎಸ್.ಎಫ್.ಸಿ ಯಲ್ಲಿ ಸಾಲ 4% ಬಡ್ಡಿ ಸಾಲವನ್ನು ರೂ.2.00 ಕೋಟಿಯಿಂದ ರೂ.5.00 ಕೋಟಿಗಳಿಗೆ ಏರಿಸಲಾಗಿದೆ. ಮೊದಲು ಬಡ್ಡಿಯನ್ನು ಸಾಲಗಾರರು ಪಾವತಿಸಿದ ನಂತರ ರಿಯಾಯಿತಿಯನ್ನು ನೀಡುತ್ತಿದ್ದಾರೆ. ಇದು ಮುಂದುವರೆಯಬಾರದು. ಮೊದಲೇ ಸರ್ಕಾರದವರೇ ನೀಡಬೇಕು. 200% **Collateral** ಭದ್ರತೆಯನ್ನು ನೀಡಲು ಪರಿಶಿಷ್ಟ ಜಾತಿ/ಪಂಗಡದವರಿಗೆ ಸಾಧ್ಯವಿಲ್ಲ. ಅದರಲ್ಲಿ ವಿನಾಯಿತಿಯು ಬೇಕಾಗಿದೆ. ಹಾಗೂ ಈ ಯೋಜನೆಯನ್ನು ಸಹಕಾರ ಹಾಗೂ ವಾಣಿಜ್ಯ ಬ್ಯಾಂಕುಗಳಿಗೂ ಸಹ ವಿಸ್ತರಿಸಬೇಕೆಂದು ಕೋರಿದರು. ಅಲ್ಲದೇ, ಈ ಹಿಂದೆ ಮಾಡಿದ ತೀರ್ಮಾನದಂತೆ ಕಾಮಗಾರಿಗಳಲ್ಲಿ ಮತ್ತು ಸರಕು ಸರಬರಾಜಿನಲ್ಲಿ ಮೀಸಲಾತಿ ಕಲ್ಪಿಸುವುದು ಇನ್ನೂ ಬಾಕಿ ಇರುತ್ತದೆಯೆಂದು ಸಹ ಹೇಳಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರು ಮಾತನಾಡಿ, ಇದನ್ನು ಬ್ಯಾಂಕುಗಳಿಗೆ ವಿಸ್ತರಿಸಿದ್ದಲ್ಲಿ ಹೆಚ್ಚಿನ ಆರ್ಥಿಕ ಹೊರೆ ಆಗುತ್ತದೆಯೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ, ಎಷ್ಟು ಹಣ ಬಡ್ಡಿಗೋಸ್ಕರ ಮೀಸಲಾತಿ ಇದೆಯೋ ಅದರಲ್ಲಿ ಖರ್ಚುಗಳನ್ನು ಭರಿಸುವ ಷರತ್ತಿಗೆ ಈ ಯೋಜನೆಯನ್ನು ಬ್ಯಾಂಕುಗಳಿಗೂ ಸಹ ವಿಸ್ತರಿಸಬಹುದು ಎಂದು ಸಮಾಜ ಕಲ್ಯಾಣ ಸಚಿವರು ತಿಳಿಸಿದರು. ಮಾನ್ಯ ಮುಖ್ಯಮಂತ್ರಿಗಳು ಈ ಮೇಲ್ಕಂಡ ಎರಡು ವಿಷಯಗಳನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಆರ್ಥಿಕ ಇಲಾಖೆಗೆ ಸೂಚಿಸಿದರು.

**(ಕ್ರಮ: ಆರ್ಥಿಕ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ)**

ಡಾ: ಉಮೇಶ್ ಜಾದವ್ ರವರ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ತಾಂಡಗಳು ಮತ್ತು ಕಾಲೋನಿಗಳಲ್ಲಿ ಆರೋಗ್ಯ ತಪಾಸಣೆ ಮತ್ತು ಇತ್ಯಾದಿಗಳನ್ನು ಕೈಗೊಂಡು ಚಿಕಿತ್ಸೆ ನೀಡಲು ಮೊಬೈಲ್ ಸಂಚಾರಿ ಆರೋಗ್ಯ ಘಟಕಗಳನ್ನು ತೆರೆಯಬೇಕೆಂದು ಕೋರಿದರು.

ಶ್ರೀ ಕೆ.ಎನ್ ರಾಜಣ್ಣ ರವರು ಮಾತನಾಡಿ, ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಲ್ಲಿ ಇರುವ ಶಾಲೆಗಳ ಕೊಠಡಿಗಳು ಕೆಲವು ಕಡೆ ಬಿದ್ದು ಹೋಗಿರುತ್ತದೆ. ಅವುಗಳನ್ನು ದುರಸ್ಥಿ ಮಾಡಬೇಕು ಹಾಗೂ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಬೇಕೆಂದು ಒತ್ತಾಯಿಸಿದರು. ಮಾನ್ಯ ಮುಖ್ಯಮಂತ್ರಿಗಳು ಅಂಗನವಾಡಿ ಮತ್ತು ಶಾಲೆಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯವರು ಕ್ರಮ ವಹಿಸಲು ಸೂಚಿಸಿದರು.

**(ಕ್ರಮ:- ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಸಚಿವರು ಮಾತನಾಡಿ, **Bathroom-cum-toilet** ಯೋಜನೆಗಳಿಗೆ ಅನುದಾನವನ್ನು ತಕ್ಷಣ ನೀಡಬೇಕೆಂದು ತಿಳಿಸಿದಾಗ, ಈಗಾಗಲೇ ಈ ಯೋಜನೆಗೆ ಆರ್.ಡಿ.ಪಿ.ಆರ್ ಇಲಾಖೆಯಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಉಪಯೋಜನೆಯಡಿ ಯಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ರೂ.400.00 ಕೋಟಿಗಳನ್ನು ಒದಗಿಸಲಾಗಿದೆಯೆಂದು ಅವರ ಗಮನಕ್ಕೆ ತರಲಾಗಿದೆ.

ಮಾನ್ಯ ಲೋಕೋಪಯೋಗಿ ಸಚಿವರು ಪರಿಶಿಷ್ಟ ಜಾತಿ/ಪಂಗಡದ ಮಹಿಳಾ ಸ್ವಸಹಾಯ ಗುಂಪುಗಳಿಗೆ ರೂ.25,000.00 ಗಳನ್ನು ನೀಡಬೇಕೆಂದರು.

ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಾತನಾಡಿ, ಸಿ.ಇ.ಟಿ ಮುಖಾಂತರ ಪ್ರವೇಶವನ್ನು ಪಡೆಯುವ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಚೆಕ್ ಮುಖಾಂತರ ಸಿ.ಇ.ಟಿ ದಲ್ಲೇ ನೀಡುವ ವ್ಯವಸ್ಥೆ ಆಗಬೇಕೆಂದು ಅಭಿಪ್ರಾಯ ಪಟ್ಟರು.

ಉನ್ನತ ಶಿಕ್ಷಣ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ, ಶುಲ್ಕ ಪಾವತಿಗೆ ಸುತ್ತುನಿಧಿ ಪ್ರಾರಂಭಿಸಿ ಬ್ಯಾಂಕಿನಲ್ಲಿ ಒಂದು ಖಾತೆಗೆ ಜಮೆ ಮಾಡಿದಲ್ಲಿ ಇದರಿಂದ ವಿದ್ಯಾರ್ಥಿಗಳಿಗೆ ನೀಡಲು ಅನುಕೂಲವಾಗುತ್ತದೆಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಕೆ.ಎನ್ ರಾಜಣ್ಣ ರವರು ಮಾತನಾಡಿ ಶುಲ್ಕ ಪಾವತಿಯನ್ನು ಕಾಮೆಡ್-ಕೆ ರವರೊಂದಿಗೆ ಚರ್ಚಿಸಿ, ಅದೇ ರೀತಿಯಲ್ಲಿ ಮಾಡುವಂತೆ ಸೂಚಿಸಿದರು.

ಶ್ರೀ ಧ್ರುವನಾರಾಯಣ ರವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆ. ಕೇವಲ ಕಟ್ಟಡವನ್ನು ನಿರ್ಮಿಸಿದರೆ ಸಾಲದು ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಸುಧಾರಣೆಯಾಗಬೇಕಾಗಿದೆ. ಮತ್ತು ಕೂಡಲೇ ಈ ಬಗ್ಗೆ ಕ್ರಮ ವಹಿಸುವಂತೆ ಒತ್ತಾಯಿಸಿದರು.

ಡಾ: ಬಿ.ಆರ್. ಅಂಬೇಡ್ಕರ್ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆಬಾವಿಯನ್ನು ಒದಗಿಸಿದರೆ ಇದು ಒಂದು ಉದ್ಯೋಗವನ್ನು ಕೊಟ್ಟಂತೆ ಆಗುತ್ತದೆಯೆಂದು ತಿಳಸಿದರು.

ಶ್ರೀ ಗೋವಿಂದ ಕಾರಜೋಳ ರವರು ಮಾತನಾಡಿ, ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿರುವ ಖಾಲಿ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಲು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಹಿರಿಯ ಅಧಿಕಾರಿಯನ್ನು ನೇಮಿಸಬೇಕು. ಮತ್ತು ಶಿಕ್ಷಣ ಮಟ್ಟವು ಬೆಳೆದರೆ ಮಕ್ಕಳ ಶಿಕ್ಷಣದ ಗುಣಮಟ್ಟ ಒಳ್ಳೆಯದಾಗುತ್ತದೆಯೆಂದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಸುಮಾರು 500 ಜನರ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ನಡೆಯುತ್ತಿದೆ. ಇನ್ನುಳಿದ ಖಾಲಿ ಹುದ್ದೆಗಳನ್ನು ಸಹ ಮುಂಬರುವ ದಿನಗಳಲ್ಲಿ ತುಂಬಲಾಗುವುದು ಎಂದರು.

ಶ್ರೀ ಧ್ರುವನಾರಾಯಣ ರವರು ಮಾತನಾಡಿ, ಬುಡಕಟ್ಟು ಆಶ್ರಮ ಶಾಲೆಗಳಲ್ಲಿ ಪರಿಸ್ಥಿತಿಯು ಶೋಚನೀಯವಾಗಿದೆ. ಅಲ್ಲಿಯೂ ಸಹ ಶಿಕ್ಷಕರನ್ನು ನೇಮಿಸಿ ಸುಧಾರಣೆಯನ್ನು ತರಬೇಕೆಂದು ತಿಳಿಸಿದರು.

ಶ್ರೀ ಗೋವಿಂದ ಕಾರಜೋಳ ರವರು ಮಾತನಾಡಿ, ಹೊರ ಸಂಪನ್ಮೂಲದಿಂದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬಾರದು ಮೆರಿಟ್ ಆಧಾರದ ಮೇಲೆ ಉತ್ತಮ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಶಿಕ್ಷಕರ ನೇಮಕಾತಿಯನ್ನು ತಕ್ಷಣ ಪ್ರಾರಂಭಿಸಲು ಮತ್ತು ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಬೇಕೆಂದು ಸೂಚಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳೂ ಸಹ ಇತರೆ ಮಕ್ಕಳ ಜೊತೆ ಸ್ಪರ್ಧೆ ಮಾಡಬಹುದೆಂಬ ಉದ್ದೇಶದಿಂದ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಅದರಿಂದ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸಿದರು.

ಶ್ರೀ ಗೋವಿಂದ ಕಾರಜೋಳ ರವರು ಮಾತನಾಡಿ ವಸತಿ ಶಾಲೆಗಳಲ್ಲಿ 1ನೇ ತರಗತಿಯಿಂದ 5ನೇ ತರಗತಿಯವರೆವಿಗೂ ಸಹ ಆಂಗ್ಲ ಮಾಧ್ಯಮದಲ್ಲಿ ಶಾಲೆಗಳು ಬರಲಿ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಮುಖ್ಯಮಂತ್ರಿಗಳು 1ನೇ ತರಗತಿಯಿಂದ 5ನೇ ತರಗತಿಯವರೆವಿಗೂ ಮಕ್ಕಳಿಗೆ ವಿದ್ಯಾಭ್ಯಾಸ ಮಾತೃಭಾಷೆಯಲ್ಲಿ ಇರಬೇಕೆಂದು ಹೇಳಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯವರು ಮಾತನಾಡಿ, ಶಿಕ್ಷಕರ ನೇಮಕಾತಿ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆಯನ್ನು ಕಳುಹಿಸಿದಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡುವುದಾಗಿ ತಿಳಿಸಿದರು.

(ಕ್ರಮ :- **ಆರ್ಥಿಕ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ**)

**8. ಕೃಷಿ ಮತ್ತು ತೋಟಗಾರಿಕೆ ಇಲಾಖೆ:-**

ಕೃಷಿ ಇಲಾಖೆಯಲ್ಲಿ 2014-15ನೇ ಸಾಲಿನಲ್ಲಿ ಒಟ್ಟು ರೂ.231.99 ಕೋಟಿಗಳು ಖರ್ಚಾಗಿರುವುದಿಲ್ಲವೆಂಬುದನ್ನು ಗಮನಿಸಿದ್ದು, ಕೃಷಿ ಇಲಾಖೆಯ ಕಾರ್ಯದರ್ಶಿಗಳು ಈ ಬಗ್ಗೆ ಉತ್ತರಿಸುತ್ತಾ, ಕೃಷಿ ವಿಭಾಗದಲ್ಲಿ 92% ಪ್ರಗತಿಯಾಗಿದೆ. ಆದರೆ, ಜಲಾನಯನ ಅಭಿವೃದ್ಧಿಗೆ **IWMP** ಕಾರ್ಯಕ್ರಮಕ್ಕೆ ಒಟ್ಟು ರೂ.700.00 ಕೋಟಿಗಳ ಕ್ರಿಯಾ ಯೋಜನೆಯಿದ್ದು, ಕೇಂದ್ರ ಸರ್ಕಾರದಿಂದ ರೂ.154.00 ಕೋಟಿಗಳನ್ನು ಮಾತ್ರ ಹಣ ಬಿಡುಗಡೆಯಾಗಿರುತ್ತದೆ. ಈ ಪೈಕಿ ಜಲಾನಯನ ಇಲಾಖೆಯಲ್ಲಿ ಸದರಿ ಕಾರ್ಯಕ್ರಮಕ್ಕೆ **SCSP / TSP** ರಡಿ ಒಟ್ಟು ರೂ.230.00 ಕೋಟಿಗಳ ಪೈಕಿ ರೂ.32.62 ಕೋಟಿಗಳು ಮಾತ್ರ ಬಿಡುಗಡೆಯಾಗಿ, ವೆಚ್ಚ ಭರಿಸಲಾಗಿದೆ ಎಂದು ತಿಳಿಸಿದರು. ಪ್ರಸಕ್ತ ಸಾಲಿನಲ್ಲಿ **IWMP** ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 50:50 ಅನುಪಾತದಲ್ಲಿ ವೆಚ್ಚ ಭರಿಸುವಂತೆ ಮಾಡಿದ್ದಾರೆ. ಅದರಂತೆ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಲೋಕೋಪಯೋಗಿ ಸಚಿವರು ರಾಜ್ಯದಲ್ಲಿ ಎಷ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರು ಸಣ್ಣ ಮತ್ತು ಅತೀ ಸಣ್ಣ ರೈತರು ಇದ್ದಾರೆಂದು ಗುರ್ತಿಸಿ, ಕೃಷಿ, ನೀರಾವರಿ, ಜಲಾನಯನ, ತೋಟಗಾರಿಕೆ ಎಲ್ಲಾ ಇಲಾಖೆಗಳ ಸಮನ್ವಯದೊಂದಿಗೆ ಅವರನ್ನು ಸ್ವಾವಲಂಭಿಗಳನ್ನಾಗಿ ಮಾಡಲು ಕ್ರಮ ಜರುಗಿಸಲು ತಿಳಿಸಿದರು.

ನೋಡಲ್ ಏಜೆನ್ಸಿ ಸಲಹೆಗಾರರು ಮಾತನಾಡುತ್ತಾ, ಕೃಷಿ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಒಟ್ಟು ಹಿಡುವಳಿದಾರರು 78.32 ಲಕ್ಷ ರೈತರಿದ್ದು, ಇದರಲ್ಲಿ 9.13 ಲಕ್ಷ ಪರಿಶಿಷ್ಟ ಜಾತಿ ಹಾಗೂ 4.72 ಲಕ್ಷ ಪರಿಶಿಷ್ಟ ಪಂಗಡದ ರೈತರು ಇರುತ್ತಾರೆಂದು ತಿಳಿಸಿದರು.

ತೋಟಗಾರಿಕೆ ಇಲಾಖೆಯಲ್ಲಿ ಸಹ ರೂ.150.00 ಕೋಟಿಗಳು ಖರ್ಚಾಗದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿದೆ. ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಈ ಬಗ್ಗೆ ಉತ್ತರಿಸುತ್ತಾ. ಎನ್.ಹೆಚ್.ಎಂ ಕೇಂದ್ರ ಸರ್ಕಾರದ ಕಾರ್ಯಕ್ರಮದಡಿ ರೂ.129.00 ಕೋಟಿಗಳು ಬಿಡುಗಡೆಯಾಗಿಲ್ಲವೆಂಬ ಕಾರಣದಿಂದ ಅನುದಾನ ಬಳಕೆ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋವಿಂದ ಕಾರಜೋಳ ರವರು ಮಾತನಾಡಿ, ಕೃಷಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿ /ಪಂಗಡದ ರೈತರಿಗೆ ಅನುಕೂಲವಾಗುವಂತೆ ಕೃಷಿ ಯಂತ್ರೋಪಕರಣಗಳ ವರ್ಕಶಾಪ್/ರಿಪೇರಿ ಸೆಂಟರ್ ಮಾಡಬೇಕೆಂದು ಹೇಳಿದರು.

ಶ್ರೀ ಧ್ರುವನಾರಾಯಣರವರು ಮಾತನಾಡಿ, ಕೃಷಿ ಇಲಾಖೆಯಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್/ಇ.ಬಿ.ಎಲ್ ವೆಚ್ಚ ಇತ್ಯಾದಿಗಳಿಗೆ ಅನುದಾನ ನೀಡಬೇಕೆಂದು ಕೋರಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ತೋಟಗಾರಿಕೆ ಇಲಾಖೆಯಲ್ಲಿ ತರಬೇತಿ ನೀಡಬೇಕೆಂದು ಸೂಚಿಸಿದರು.

**(ಕ್ರಮ:-ತೋಟಗಾರಿಕೆ ಇಲಾಖೆ)**

9. **ರೇಷ್ಮೆ ಇಲಾಖೆ:-**

ರೇಷ್ಮೆ ಇಲಾಖೆಯ ಆಯುಕ್ತರು ಮಾತನಾಡಿ, ಒಟ್ಟು ಒದಗಿಸಿದ ಅನುದಾನದಲ್ಲಿ ರೂ.10.00 ಕೋಟಿಗಳನ್ನು ವೆಚ್ಚ ಮಾಡಲಾಗಿರುವುದಿಲ್ಲ. ಉಳಿದ ರೂ.23.00 ಕೋಟಿಗಳನ್ನು ಖರ್ಚು ಮಾಡಿರುತ್ತಾರೆ. ರೇಷ್ಮೆ ಗೂಡು ಕಟ್ಟಡಗಳಿಗೆ ಟೆಂಡರ್ ಕರೆಯಲು ವಿಳಂಬವಾಗಿದ್ದು, ಅನುದಾನ ಖರ್ಚಾಗಿರುವುದಿಲ್ಲ. ಈಗ ಟೆಂಡರ್ ಪ್ರಕ್ರಿಯೆಯು ಮುಗಿದಿರುವುದರಿಂದ, ಅನುದಾನವನ್ನು ಖರ್ಚು ಮಾಡಲಾಗುವುದು ಎಂದು ತಿಳಿಸಿದರು.

ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿ ಈ ಇಲಾಖೆಯಲ್ಲಿಯೂ ಸಹ ತರಬೇತಿ ಹಮ್ಮಿಕೊಳ್ಳಲು ಸೂಚಿಸಿದರು.

**(ಕ್ರಮ: ರೇಷ್ಮೆ ಇಲಾಖೆ)**

10. **ಪಶು ಸಂಗೋಪನೆ ಇಲಾಖೆ:-**

ಪಶು ಸಂಗೋಪನಾ ಇಲಾಖೆಯ ಕಾರ್ಯದರ್ಶಿಗಳು ಮಾತನಾಡಿ ಉಪ ಯೋಜನೆಗಳಡಿಯಲ್ಲಿ 86% ಸಾಧನೆ ಮಾಡಲಾಗಿದೆ. ವರ್ಷದ ಕೊನೆಯ ಹಂತದಲ್ಲಿ ಅನುದಾನವು ಬಂದಿರುವುದರಿಂದ, ಖರ್ಚು ಮಾಡುವಲ್ಲಿ ವಿಳಂಭವಾಗಿದೆ ಎಂದರು. ಹಾಗೂ ಕಳೆದ ವರ್ಷದಲ್ಲಿ ಹಾಲು ಪ್ರೋತ್ಸಾಹಧನದ ಅನುದಾನದಲ್ಲಿ ಉಳಿದ ಹಣವನ್ನು 75 ರಷ್ಟು ಸಹಾಯಧನದಲ್ಲಿ ಜಾನುವಾರುಗಳನ್ನು ಖರೀದಿ ಮಾಡಿ ವಿತರಿಸಲು ಕ್ರಮ ಜರುಗಿಸಲಾಗುತ್ತಿದೆಯೆಂದರು.

ಮಾನ್ಯ ಮುಖ್ಯಮಂತ್ರಿಗಳು ವೈಯಕ್ತಿಕವಾಗಿ ಕಳೆದ ವರ್ಷದಲ್ಲಿ ಎಷ್ಟು ಮೇಕೆ, ಕುರಿ ಹಸುಗಳನ್ನು ವಿತರಿಸಿರುತ್ತೀರಿ ಎಂದು ಪ್ರಶ್ನಿಸಿದರು.

ಶ್ರೀ ಕೆ.ಎನ್ ರಾಜಣ್ಣ ರವರು ಮಾತನಾಡಿ, ಹಿಂದಿನ ವರ್ಷದಲ್ಲಿ ಯಾವುದೇ ಫಲಾನುಭವಿಗಳಿಗೆ ಜಾನುವಾರುಗಳನ್ನು ನೀಡಿರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ಶೇಕಡ 60 ರಷ್ಟು ಸಹಾಯಧನದಲ್ಲಿ ಜಾನುವಾರುಗಳನ್ನು ಖರೀದಿ ಮಾಡಿ ವಿತರಿಸಲು ನೋಡಲ್ ಏಜೆನ್ಸಿ ಸಭೆಯಲ್ಲಿ ಈಗಾಗಲೇ ಶಿಫಾರಸ್ಸು ಮಾಡಿದ್ದೇವೆ ಎಂದು ತಿಳಿಸಿದರು.

ಪಶು ಸಂಗೋಪನಾ ಇಲಾಖೆಯ ಕಾರ್ಯದರ್ಶಿಗಳು ಮಾತನಾಡಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಬೇಡಿಕೆಯನುಸಾರವಾಗಿ 33 ಪ್ರತಿಶತ ಸಹಾಯಧನದಲ್ಲಿ ಹೆಚ್ಚಿನ ಜನರಿಗೆ ನೀಡಬಹುದಾಗಿದೆ. ಮತ್ತು ಹೆಚ್ಚಿನ ಸಹಾಯಧನ ಇದ್ದಲ್ಲಿ ದುರುಪಯೋಗವಾಗುವ ಸಾಧ್ಯತೆಯಿದೆ ಎಂದು ತಿಳಿಸಿದರು. ಆದರೆ, 60 ಪ್ರತಿಶತ ಸಹಾಯಧನವನ್ನು ನೀಡಬೇಕೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ಒತ್ತಾಯಿಸಿದರು. ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದಲೂ ಸಹ ಸಹಾಯಧನವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಚರ್ಚಿಸಿದ ನಂತರ 50% ಸಹಾಯಧನವನ್ನು ನೀಡಲು ತೀರ್ಮಾನಿಸಲಾಗಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನಾ ಇಲಾಖೆ)**

11. **ಭಾರಿ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆ:-**

ಭಾರಿ ನೀರಾವರಿ ಇಲಾಖೆಯಲ್ಲಿ ರೂ.254.00 ಕೋಟಿಗಳು ಹಾಗೂ ಸಣ್ಣ ನೀರಾವರಿ ಇಲಾಖೆಯಲ್ಲಿ ರೂ.100.00 ಕೋಟಿಗಳು ಖರ್ಚಾಗದೇ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿದೆ. ಇದಕ್ಕೆ ಅಪರ ಮುಖ್ಯ ಕಾರ್ಯದರ್ಶಿಗಳು ಭಾರಿ ನೀರಾವರಿ ರವರು ಮಾತನಾಡಿ ಉಳಿದ ಅನುದಾನವನ್ನು ನಿಗಮಗಳಿಗೆ ನೀಡಿದ್ದು, ಅದನ್ನು ಖರ್ಚು ಮಾಡಲಾಗುವುದೆಂದು ತಿಳಿಸಿ, **SCSP** ಉಪ ಯೋಜನೆಯಡಿ **KBJNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಮತ್ತು ಹೊಸ ಕಾಮಗಾರಿಗಳಿಗೆ ಒಟ್ಟು ರೂ.496.98 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರ ಪೈಕಿ ರೂ.433.90 ಕೋಟಿಗಳು ಬಿಡುಗಡೆಯಾಗಿರುತ್ತದೆ. ಅಂದರೆ ಮುಂದುವರೆದ ಕಾಮಗಾರಿಗಳಿಗೆ ಇನ್ನು ರೂ.63.00 ಕೋಟಿಗಳು ಹೆಚ್ಚುವರಿಯಾಗಿ 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಲಾಗುವುದು. **KNNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಒಟ್ಟು ರೂ.522.52 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರ ಪೈಕಿ ರೂ.476.59 ಕೋಟಿಗಳು ಬಿಡುಗಡೆಯಾಗಿರುತ್ತದೆ. ಅಂದರೆ ಮುಂದುವರೆದ ಕಾಮಗಾರಿಗಳಿಗೆ ಇನ್ನು ರೂ.45.93 ಕೋಟಿಗಳು ಹೆಚ್ಚುವರಿಯಾಗಿ 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಲಾಗುವುದು. **CNNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಮತ್ತು ಹೊಸ ಕಾಮಗಾರಿಗಳಿಗೆ ಒಟ್ಟು ರೂ.260.03 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರ ಪೈಕಿ ರೂ.252.60 ಕೋಟಿಗಳು ಬಿಡುಗಡೆಯಾಗಿರುತ್ತದೆ. ಅಂದರೆ ಮುಂದುವರೆದ ಕಾಮಗಾರಿಗಳಿಗೆ ಇನ್ನು ರೂ.7.74 ಕೋಟಿಗಳು ಹೆಚ್ಚುವರಿಯಾಗಿ 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಲಾಗುವುದು. **ಒಟ್ಟಾರೆ ರೂ.116.67 ಕೋಟಿಗಳನ್ನು 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಲಾಗುವುದು**.

**TSP** ಉಪ ಯೋಜನೆಯಡಿ **KBJNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಮತ್ತು ಹೊಸ ಕಾಮಗಾರಿಗಳಿಗೆ ಒಟ್ಟು ರೂ.157.88 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರೆ ರೂ.174.00 ಕೋಟಿಗಳು ಬಿಡುಗಡೆಯಾಗಿರುತ್ತದೆ. **KNNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಒಟ್ಟು ರೂ.195.43 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರ ಪೈಕಿ ರೂ.164.32 ಕೋಟಿಗಳು ಬಿಡುಗಡೆಯಾಗಿರುತ್ತದೆ. ಅಂದರೆ ಮುಂದುವರೆದ ಕಾಮಗಾರಿಗಳಿಗೆ ಇನ್ನು ರೂ.31.00 ಕೋಟಿಗಳು ಹೆಚ್ಚುವರಿಯಾಗಿ 2015-16ನೇ ಸಾಲಿನಲ್ಲಿ ಒದಗಿಸಿದ ಅನುದಾನದಿಂದ ಭರಿಸಲಾಗುವುದು. **CNNL** ಗೆ 2014-15ನೇ ಸಾಲಿನಲ್ಲಿ ಮುಂದುವರೆದ ಮತ್ತು ಹೊಸ ಕಾಮಗಾರಿಗಳಿಗೆ ಒಟ್ಟು ರೂ.31.57 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಅದರ ಪೈಕಿ ರೂ.97.44 ಕೋಟಿಗಳು ಬಿಡುಗಡೆಯಾಗಿರುತ್ತದೆ. ಮೇಲ್ಕಂಡಂತೆ ಮುಂದುವರೆದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಸಕ್ತ ಸಾಲಿನ ಅನುದಾನವನ್ನೂ ಸಹ ಉಪಯೋಗಿಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ ಎಂದು ತಿಳಿಸಿದರು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸಮಾಜ ಕಲ್ಯಾಣ ಇಲಾಖೆಯ ಅಭಿವೃದ್ಧಿ ನಿಗಮಗಳಿಗೆ ನೀಡಬೇಕಾಗಿದ್ದ ಅನುದಾನದ ಬಗ್ಗೆ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿ ಕ್ರಮ ಜರುಗಿಸಲಾಗುವುದು.

ಸಮಾಜ ಕಲ್ಯಾಣ ಇಲಾಖೆ ಮತ್ತು ಆರ್ಥಿಕ ಇಲಾಖೆಗಳನ್ನು ಸಂಪರ್ಕಿಸಿ ಮೇಲ್ಕಂಡ ವಿಷಯವನ್ನು ಬಗೆಹರಿಸಿಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು.

**(ಕ್ರಮ:- ಅಪರ ಮುಖ್ಯ ಕಾರ್ಯದರ್ಶಿಗಳು, ಭಾರಿ ನೀರಾವರಿ ಮತ್ತು ಆರ್ಥಿಕ ಇಲಾಖೆ)**

ಭಾರಿ ನೀರಾವರಿ ಇಲಾಖೆಯ ವತಿಯಿಂದ ನೀರಾವರಿ ಕಾಮಗಾರಿಗಳನ್ನು ಅಲ್ಲದೇ ಪರಿಶಿಷ್ಟ ಜಾತಿ/ಪಂಗಡಗಳ ಕಾಲೋನಿಗಳಲ್ಲಿ ಸಿ.ಸಿ ರಸ್ತೆ ಮತ್ತು ಸಮುದಾಯ ಭವನಗಳನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು. ಈ ವರ್ಷದಲ್ಲಿ ನೀಡಿದ ಅನುದಾನವನ್ನು ಆದ್ಯತೆಯ ಮೇಲೆ ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸಲು ಮತ್ತು ಹಿಂದೆ ಸಿ.ಸಿ.ರಸ್ತೆ ಮತ್ತು ಸಮುದಾಯ ಭವನಗಳು ಇತ್ಯಾದಿ ಅಪೂರ್ಣಗೊಂಡಿದ್ದಲ್ಲಿ ಅವುಗಳನ್ನು ಪೂರ್ಣಗೊಳಿಸಲು ಸಹ ನಿರ್ದೇಶನ ನೀಡಲಾಗಿದೆ.

ಶ್ರೀ ಹೆಚ್.ಕೆ. ಪಾಟೀಲ್‌ರವರು ಮಾತನಾಡಿ, ಪರಿಶಿಷ್ಟ ಜಾತಿ/ಪಂಗಡದವರು ಒಂದು ಕಡೆ ಜಮೀನು ಹೊಂದಿದ್ದಲ್ಲಿ ಅಂತಹ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಕಾಲುವೆಯ ಮುಖಾಂತರ ನೀರು ಒದಗಿಸಲು ಆಗದೇ ಇದ್ದ ಪಕ್ಷದಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರವಾದರೂ ನೀರಾವರಿ ಸೌಲಭ್ಯ ಕಲ್ಪಿಸಬೇಕೆಂದು ಹೇಳಿದರು. ಇದಕ್ಕೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರತಿಕ್ರಿಯೆ ನೀಡುತ್ತಾ, ಗದಗ್ ತಾಲೂಕಿನ ಮಹಾಲಿಂಗಪೂರ ತಾಂಡಾದಲ್ಲಿ 142 ರೈತರಿಗೆ ಸುಮಾರು 489 ಎಕರೆ ಜಮೀನುಗಳು ಲಭ್ಯವಿದ್ದು, ಆ ಜಮೀನುಗಳಿಗೆ ನೀರಾವರಿ ಸೌಕರ್ಯವನ್ನು ಕಲ್ಪಿಸಲು ಪ್ರಸ್ತಾವನೆಯು ಬಂದಿರುತ್ತದೆ. ಅದರಿಂದ ಈ ಪ್ರಸ್ತಾವನೆಯನ್ನು ಭಾರಿ ನೀರಾವರಿ ಇಲಾಖೆಯವರು ಅವರ ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು ಕ್ರಮ ಜರುಗಿಸಬೇಕೆಂದು ಸೂಚಿಸಿದರು.

ಭಾರಿ ನೀರಾವರಿ ಮತ್ತು ಸಣ್ಣ ನೀರಾವರಿ ಇಲಾಖೆಯಲ್ಲಿ ಸೋಲಾರ್ ಪಂಪುಗಳ ಮುಖಾಂತರ ನೀರಿನ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಅದಕ್ಕೆ ಸುಮಾರು ರೂ.6.00 ಲಕ್ಷದಿಂದ ರೂ.7.00 ಲಕ್ಷಗಳು ಘಟಕ ವೆಚ್ಚವಾಗುತ್ತದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಘಟಕ ವೆಚ್ಚ ರೂ.2.50 ಲಕ್ಷಗಳು ಇದ್ದು, ಈ ಇಲಾಖೆಗಳಲ್ಲಿ ಪ್ರತಿ ಫಲಾನುಭವಿಗೆ ರೂ.6.00 ಲಕ್ಷಗಳಿಂದ ರೂ.7.00 ಲಕ್ಷಗಳನ್ನು ಖರ್ಚು ಮಾಡುತ್ತಿರುವುದು ಸಮಂಜಸವಾಗಿರುವುದಿಲ್ಲ. ಪ್ರತಿಯೊಬ್ಬರಿಗೂ ಒಂದೇ ರೀತಿಯಲ್ಲಿ ನಿಯಮ ಅಳವಡಿಸಿಕೊಳ್ಳಲು ಮಾನ್ಯ ಸಮಾಜ ಕಲ್ಯಾಣ ಸಚಿವರು ಸೂಚಿಸಿದರು.

ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆಯವರು ಮಾತನಾಡುತ್ತಾ, ಸೋಲಾರ್ ಪ್ಯಾನಲ್ ಅಳವಡಿಸುವುದರಿಂದ, ಕೆಲವು ಯೋಜನೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ. ಮತ್ತು ಸೌರಶಕ್ತಿಯನ್ನು ಉಪಯೋಗಿಸಿಕೊಳ್ಳಲು ಆಯವ್ಯಯದಲ್ಲಿ ಸಹ ಘೋಷಿಸಲಾಗಿದೆ. ಕಡಿಮೆ ಆಳದಲ್ಲಿ ನೀರು ದೊರೆತಲ್ಲಿ ಅಂತಹ ಕೊಳವೆಬಾವಿಗಳಿಗೆ ಸೋಲಾರ ಪಂಪ್‌ಸೆಟ್ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ವ್ಯಕ್ತಪಡಿಸಿದರು.

ಮಾನ್ಯ ಕಾನೂನು ಸಚಿವರು ಎ.ಐ.ಬಿ.ಪಿ ಯೋಜನೆಯ ಕಾರ್ಯಕ್ರಮ ಏನಾಯಿತು ಎಂದು ಪ್ರಶ್ನಿಸಿದಾಗ, ಈ ವರ್ಷ ಈ ಯೋಜನೆಯನ್ನು ಪ್ರಧಾನಮಂತ್ರಿ ಸಿಂಚಾಯಿ ಕೃಷಿ ಯೋಜನೆ ಎಂದು ಕೇಂದ್ರದಲ್ಲಿ ಬದಲಾವಣೆ ಮಾಡುತ್ತಿದ್ದಾರೆಂದು ಕಾರ್ಯದರ್ಶಿಯವರು ತಿಳಿಸಿದರು.

ಶ್ರೀ ಗೋವಿಂದ ಎಂ ಕಾರಜೋಳ ರವರು ಮಾತನಾಡಿ, ರೂ.6.00 ಲಕ್ಷದಿಂದ ರೂ.7.00 ಲಕ್ಷ ಖರ್ಚಾಗುವ ಸೋಲಾರ್ ಬದಲಿಗೆ ರೂ.2.00 ಲಕ್ಷದಂತೆ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ಹೆಚ್ಚಿನ ಫಲಾನುಭವಿಗಳಿಗೆ ಅನುಕೂಲ ಮಾಡಬಹುದು ಮತ್ತು ಎರಡು ಯೋಜನೆಗಳಲ್ಲಿ ವ್ಯತ್ಯಾಸ ಇಡುವುದು ಸರಿಯಲ್ಲ ಎಂದರು. ಹೆಚ್ಚು ಆಳದಲ್ಲಿ ಒಳಜಮೀನು ಇರುವ ಪ್ರದೇಶಗಳಲ್ಲಿ ಸೋಲಾರ್ ಪಂಪು ಕೆಲಸ ಮಾಡುವುದು ಇಲ್ಲವೆಂದು ತಿಳಿಸಿದರು.

ಶ್ರೀ ಧ್ರುವನಾರಾಯಣ ರವರು ಮಾತನಾಡಿ, ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಸೋಲಾರ್ ಬಳಸಬಹುದು ಎಂದು ಹೇಳಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಲ್ಲಿ ಪ್ರಯತ್ನ ಮಾಡಿ ಎಂದರು. 2015-16 ನೇ ಸಾಲಿನಲ್ಲಿ ನೋಡಲ್ ಏಜೆನ್ಸಿಯ ತೀರ್ಮಾನದಂತೆ, ಕ್ರಮ ಜರುಗಿಸಿ ಎಂದು ತಿಳಿಸಿದರು. ಇದರಿಂದ ಇಬ್ಬರಿಂದ ಮೂರು ಜನ ರೈತರನ್ನು ಗುಂಪು ಮಾಡಿ, ಒಂದೇ ಕಡೆ ರೈತರಿಗೆ ಜಮೀನು ಇದ್ದಲ್ಲಿ ಅಂತಹವರಿಗೆ ಸೋಲಾರ ಮುಖಾಂತರ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದು

ಶ್ರೀ ಕೆ,.ಹೆಚ್ ಪಾಟೀಲ್ ರವರು ಮಾತನಾಡಿ, ಈಗಾಗಲೇ ಕೈಗೊಂಡ ಯೋಜನೆಗಳನ್ನು ಪೂರ್ಣಗೊಳಿಸಿ ಮತ್ತು ತಾಂಡಾಗಳ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಅಫ್ಟ್ ಇರಿಗೇಷನ್ (ಏತ ನೀರಾವರಿ) ವ್ಯವಸ್ಥೆಯನ್ನು ಮಾಡಿಕೊಡುವಂತೆ ತಿಳಿಸಿದರು.

ಶ್ರೀ ಧ್ರುವನಾರಾಯಣ ರವರು ಮಾತನಾಡಿ ವಿವಿಧ ಇಲಾಖೆಗಳು ಕಾಲೋನಿಗಳಲ್ಲಿ ರಸ್ತೆಯನ್ನು ಮಾಡುತ್ತಿದ್ದಾರೆ. ಇದರಿಂದ ಓವರ್ ಲ್ಯಾಪ್ ಆಗುವ ಸಾಧ್ಯತೆಗಳಿವೆ. ಆದ್ದರಿಂದ ಇದರ ಬಗ್ಗೆ ಸಮೀಕ್ಷೆಯನ್ನು ನಡೆಸಬೇಕೆಂದು ಸೂಚಿಸಿದರು.

ಶ್ರೀ ರಾಜು ಅಲಗೂರು ರವರು ಸಿ.ಸಿ. ರಸ್ತೆ ಮತ್ತು ಭವನಗಳ ನಿರ್ಮಾಣವನ್ನು ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯ ಪಟ್ಟರು.

12. **ವಸತಿ ಇಲಾಖೆ:-**

ಪ್ರಸ್ತುತ ವರ್ಷ ಗ್ರಾಮೀಣ ಪ್ರದೇಶದಲ್ಲಿ 1,00,000 ಮನೆಗಳನ್ನು ಹಾಗೂ ನಗರ ಪ್ರದೇಶದಲ್ಲಿ 50,000 ಮನೆಗಳನ್ನು ನಿರ್ಮಿಸಲು ಹಾಗೂ 50,000 ನಿವೇಶನಗಳನ್ನು ಪರಿಶಿಷ್ಟ ಜಾತಿ/ಪಂಗಡದ ವಸತಿ ರಹಿತರಿಗೆ ನಿರ್ಮಿಸಲು ಆಯವ್ಯಯದಲ್ಲಿ ಘೋಷಿಸಿದ್ದು, ಅದನ್ನು ಜಾರಿಗೊಳಿಸಲು ಕ್ರಮ ವಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು. ಈ ಬಗ್ಗೆ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ, ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನ ಪ್ರಗತಿಯಲ್ಲಿರುವ ಮನೆಗಳಿಗೆ ಅವಶ್ಯಕತೆಯಿದ್ದು, ಅದರಲ್ಲಿ ರೂ.450.00 ಕೋಟಿಗಳನ್ನು ಮಾತ್ರ ಮೇಲೆ ವಿವರಿಸಿದ ಮನೆಗಳ ನಿರ್ಮಾಣಕ್ಕಾಗಿ ಉಪಯೋಗಿಸಲು ಅವಕಾಶವಿರುತ್ತದೆಯೆಂದು ತಿಳಿಸಿದರು. ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆಯವರು ಮಾತನಾಡುತ್ತಾ, ಫಲಾನುಭವಿಗಳ ಆಯ್ಕೆಯಲ್ಲಿ ವಿಳಂಬ ಆಗುವುದನ್ನು ತಪ್ಪಿಸಿದಲ್ಲಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆಯೆಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖಾ ಕಾರ್ಯದರ್ಶಿಗಳು ಮಾತನಾಡಿ, ಈ ವಿಷಯವನ್ನು ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಮತ್ತು ಸದರಿ ಯೋಜನೆಯನ್ನು ಡಾ: ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ನಿರ್ದೇಶನ ನೀಡಲು ಕೋರಿದರು.

ಇದೇ ಸಂದರ್ಭದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮಾತನಾಡಿ, ಪಂಚಾಯತ್ ರಾಜ್ ಕಾಯಿದೆಯ ಪ್ರಕಾರ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಗಳಲ್ಲಿ ಮಾಡಬೇಕಾಗಿದೆಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಫಲಾನುಭವಿಗಳ ಆಯ್ಕೆಯಲ್ಲಿ ದೇವದಾಸಿಯರಿಗೆ ಮತ್ತು ಹೆಚ್.ಐ.ವಿ ಪೀಡಿತರಿಗೆರ ಮನೆಗಳ ನಿರ್ಮಾಣಕ್ಕೆ ವಿನಾಯಿತಿಯನ್ನು ನೀಡಲಾಗಿದೆ. ಅದರಂತೆ ಪರಿಶಿಷ್ಟ ಜಾತಿ/ಪಂಗಡದವರ ಜನಾಂಗದ ಫಲಾನುಭವಿಗಳ ಆಯ್ಕೆಯಲ್ಲೂ ಸಹ ಈ ವಿನಾಯಿತಿಯನ್ನು ನೀಡಬಹುದೆಂದು ಸಮಾಜ ಕಲ್ಯಾಣ ಸಚಿವರು ಕೋರಿದರು. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಮನೆಗಳ ನಿರ್ಮಾಣವನ್ನು ಒಂದು ವರ್ಷದಲ್ಲಿ ಎಲ್ಲಾ ಪೂರ್ಣಗೊಳಿಸಲು

ಆಗುವುದಿಲ್ಲ. ಮತ್ತು ಫಲಾನುಭವಿಗಳನ್ನು ಆಯ್ಕೆ ಮಾಡಲು ಪ್ರತ್ಯೇಕ ಸಮಿತಿಯನ್ನು ರಚಿಸುವ ಬಗ್ಗೆ ಪರಿಶೀಲಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರಿಗೆ ತಿಳಿಸಿದರು, ಹಾಗೂ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಇರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ 2011 ರ ಜನಗಣತಿ ಪ್ರಕಾರ ಇರುವ ಜನಸಂಖ್ಯೆಗನುಗುಣವಾಗಿ ಮನೆಗಳ ಮತ್ತು ನಿವೇಶನಗಳ ಹಂಚಿಕೆ ಆಗಬೇಕೆಂದು ಸೂಚಿಸಲಾಯಿತು.

**(ಕ್ರಮ: ವಸತಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ)**

13. **ಯೋಜನಾ ಇಲಾಖೆ:-**

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ ಮಾತನಾಡುತ್ತಾ, ಮಲೆನಾಡು ಅಭಿವೃದ್ಧಿ ಮಂಡಳಿಗೆ ರೂ.9.64 ಕೋಟಿಗಳು ಮತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ರೂ.6.03 ಕೋಟಿಗಳು ಮತ್ತು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ರೂ.253.06 ಕೋಟಿಗಳು ಮತ್ತು ಕರ್ನಾಟಕ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ರೂ.144.97 ಕೋಟಿಗಳು ಒಟ್ಟಾರೆಯಾಗಿ ರೂ.408.84 ಕೋಟಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ರೂ.85.00 ಕೋಟಿಗಳು ವೆಚ್ಚವಾಗುವುದಿದೆ. ಈ ಅನುದಾನವನ್ನು ಮನೆಗಳನ್ನು ನಿರ್ಮಿಸಲು ಉಪಯೋಗಿಸಬೇಕೆಂದು ನೋಡಲ್ ಏಜೆನ್ಸಿಯವರು ಸಲಹೆ ನೀಡಿದ್ದಾರೆ. ಆದರೆ, ಈ ಮಂಡಳಿಗಳಿಗೆ ಕ್ರಿಯಾಯೋಜನೆಯನ್ನು ಈಗಾಗಲೇ ಮಾನ್ಯ ರಾಜ್ಯಪಾಲರಿಂದ ಅನುಮೋದನೆಗೊಂಡಿದೆ. ಈ ಹಂತದಲ್ಲಿ ಬೇರೆ ಯೋಜನೆಗಳಿಗೆ ಬದಲಾವಣೆ ಮಾಡುವುದು ಸೂಕ್ತವಲ್ಲವೆಂದು ತಿಳಿಸಿದರು.

ವಸತಿ ಯೋಜನೆಗೆ ಹೆಚ್ಚಿನ ಅನುದಾನವು ಬೇಕಾಗಿರುವುದರಿಂದ, ಬೇರೆ ಇಲಾಖೆಯಿಂದ ಅನುದಾನವನ್ನು ವಸತಿ ಇಲಾಖೆಗೆ ವರ್ಗಾವಣೆ ಮಾಡಬಹುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.

ಉನ್ನತ ಶಿಕ್ಷಣ, ಅರಣ್ಯ, ರೇಷ್ಮೆ, ಪ್ರವಾಸೋದ್ಯಮ ಇಲಾಖೆಗಳಲ್ಲಿ ಅನುದಾನದ ಕೊರತೆ ಇದೆ ಇದನ್ನು ಬೇರೆ ಇಲಾಖೆಗಳಿಂದ ಉಳಿಕೆಯಾಗುವ ಅನುದಾನದಿಂದ ಮರು ಹಂಚಿಕೆ ಮಾಡಲು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ತಿಳಿಸಿದರು.

ಈ ಕೆಳಕಂಡ ಇಲಾಖೆಗಳು ಹೆಚ್ಚಿನ ಅನುದಾನವನ್ನು ಒದಗಿಸಲು ಕೋರಿದೆ.

| | | |
|---|---|---|
| 1. | ಉನ್ನತ ಶಿಕ್ಷಣ ಇಲಾಖೆ | ರೂ.500.00 ಕೋಟಿಗಳು |
| 2. | ಪ್ರವಾಸೋದ್ಯಮ ಇಲಾಖೆ | ರೂ. 80.00 ಕೋಟಿಗಳು |
| 3. | ರೇಷ್ಮೆ ಇಲಾಖೆ | ರೂ. 10.00 ಕೋಟಿಗಳು |
| 4. | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ರೂ. 13.00 ಕೋಟಿಗಳು |
| 5. | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ರೂ. 12.00 ಕೋಟಿಗಳು |
| 6. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ (ದೇವದಾಸಿಯರಿಗೆ ಮನೆ ನಿರ್ಮಾಣಕ್ಕೆ) | ರೂ. 3.00 ಕೋಟಿಗಳು |

ಸದರಿ ಇಲಾಖೆಗಳು ಹೆಚ್ಚಿನ ಅನುದಾನ ಒದಗಿಸಲು ಕೋರುತ್ತಿರುವುದರ ಹಿನ್ನೆಲೆಯಲ್ಲಿ, ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ರೆವಿನ್ಯೂ ಲೆಕ್ಕಶೀರ್ಷಿಕೆಯಿಂದ ಅವಶ್ಯವಿರುವ ಇನ್ನೊಂದು ರೆವಿನ್ಯೂ ಲೆಕ್ಕಶೀರ್ಷಿಕೆಗೆ ಅನುದಾನವನ್ನು ಮರುಹಂಚಿಕೆ ಮಾಡಲು, ಅದೇರೀತಿ ಬಂಡವಾಳ ಲೆಕ್ಕಶೀರ್ಷಿಕೆಗಳಲ್ಲೂ ಸಹ ಮರುಹಂಚಿಕೆ ಮಾಡಲು ಅವಕಾಶವಿದೆ. ಇಲಾಖೆಗಳು ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಪರಿಶೀಲಿಸಿ, ಅನುಮೋದನೆಯನ್ನು ನೀಡಬಹುದಾಗಿದೆ ಎಂದು ತಿಳಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದಂತೆ ಎಲ್ಲಾ ಅನುದಾನವನ್ನು ಅದೇ ವರ್ಷದಲ್ಲಿ ಖರ್ಚು ಮಾಡಬೇಕಾದರೆ ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಉಪಯೋಜನೆಗಳಡಿಯಲ್ಲಿ ಒದಗಿಸಿದ ಅನುದಾನದಲ್ಲಿ ನಾಲ್ಕನೆ ಕಂತುಗಳನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಆಯಾ ಸಂಬಂಧಪಟ್ಟ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ನೀಡಬೇಕೆಂದು ಸಭೆಯಲ್ಲಿ ವಿಷಯವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಇವರು ಮಂಡಿಸಿದರು. ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳು ಸಹ ಇದನ್ನು ನೋಡಲ್ ಏಜೆನ್ಸಿ ಸಭೆಯಲ್ಲಿಯೂ ಸಹ ಮಂಡಿಸಿದರು. ನೋಡಲ್ ಏಜೆನ್ಸಿ ಇದಕ್ಕೆ ಸಮ್ಮತಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಸದರಿ ವಿಷಯಗಳನ್ನು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು

**(ಕ್ರಮ:- ಆರ್ಥಿಕ ಇಲಾಖೆ ಹಾಗೂ ಎಲ್ಲಾ ಅಭಿವೃದ್ಧಿ ಇಲಾಖೆಗಳು)**

14. **ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ :**

ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ, ಹೆಚ್ಚಿನ ಅನುದಾನ ರೂ.12.00 ಕೋಟಿಗಳನ್ನು ಮಂಜೂರು ಮಾಡಲು ಕೋರಿದರು.

ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರು ಮಾತನಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಬಾಗಲಕೋಟೆ, ಹುಬ್ಬಳ್ಳಿ, ಗದಗ ಸೆಟಲ್‌ಮೆಂಟ್ ಏರಿಯಾದಲ್ಲಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಹಾಕಿ, ಕಬಡ್ಡಿ, ಫುಟ್‌ಬಾಲ್ ಆಟಗಾರರಿಗೆ ಪ್ರೋತ್ಸಾಹ ಸಿಗಬೇಕೆಂದರು.

15. ಎಲ್ಲಾ ವಿಷಯಗಳನ್ನು ಚರ್ಚಿಸಿದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನಂತೆ ಸೂಚನೆಗಳನ್ನು ನೀಡಿದರು. **"2015-16ನೇ ಸಾಲಿಗೆ ಪಜಾಉಯೋ ಮತ್ತು ಗಿಉಯೋ ಯಡಿಯಲ್ಲಿ ಕ್ರಿಯಾ ಯೋಜನೆಯನ್ನು ಈ ರಾಜ್ಯ ಪರಿಷತ್ ಸಭೆ ಒಪ್ಪಿಕೊಳ್ಳುತ್ತದೆ. ಎಲ್ಲಾ ಸದಸ್ಯರ ಮತ್ತು ಇಲಾಖೆಯವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನೋಡಲ್ ಏಜೆನ್ಸಿ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಷ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹೇಳಿದಂತೆ ಕಳೆದ ವರ್ಷದ ಉಳಿಕೆ ಹಣವನ್ನು ಒಂದು ವರ್ಷ ಬಿಟ್ಟು ನಂತರದ ವರ್ಷ ಉಪಯೋಗಿಸಬಹುದು. ಅದಕ್ಕೆ ಅವಕಾಶ ನೀಡದಂತೆ, ಈ ವರ್ಷದ ಅನುದಾನವನ್ನು ಈ ವರ್ಷವೇ ಉಪಯೋಗಿಸಬೇಕು. ಉಳಿಕೆಗೆ ಅವಕಾಶ ಕೊಡಬಾರದು. ಇದರ ಜವಾಬ್ದಾರಿಯನ್ನು ಎಲ್ಲ ಅಧಿಕಾರಿಗಳು ತೆಗೆದುಕೊಳ್ಳಬೇಕು. ತಪ್ಪಿದಲ್ಲಿ ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ. ಮುಂದಿನ ವರ್ಷದಿಂದ ಕಟುನಿಟ್ಟಾಗಿ ಮಾಡಬೇಕು. ಇದು ನಮ್ಮ ಸರ್ಕಾರದ ಒಂದು ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿರುತ್ತದೆ. ಆದ್ದರಿಂದ ಎಲ್ಲ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಆಗಿಂದಾಗ್ಗೆ ಪರಿಶೀಲನೆ ಮಾಡಿ, ಉಸ್ತುವಾರಿ ಮಾಡುತ್ತಿರಬೇಕು.**

**ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯ ಒದಗಿಸಬೇಕು. ಒಂದು ಕಾಲಮಿತಿಯಲ್ಲಿ ಅಂದರೆ ಒಂದು ತಿಂಗಳ ಒಳಗಾಗಿ ಯಾವ ಯಾವ ಪ್ರದೇಶಗಳಲ್ಲಿ ಹಾಸ್ಟೆಲ್‌ಗಳು ಇಲ್ಲ, ಎಲ್ಲಿ ನಿವೇಶನಗಳು ಇಲ್ಲ, ಅಲ್ಲಿ ನಿವೇಶನ ಖರೀದಿಗೆ ಕ್ರಮ ತೆಗೆದುಕೊಳ್ಳಬೇಕು. ಹಾಸ್ಟೆಲ್‌ಗಳನ್ನು ಮಂಜೂರು ಮಾಡಬೇಕು. ಶಿಕ್ಷಣ ಬಹಳ ಮುಖ್ಯ. ವಸತಿ ಶಾಲೆಗಳಲ್ಲಿ ಶಿಕ್ಷಕರನ್ನು ಕೂಡಲೇ ಆಯ್ಕೆ ಮಾಡಬೇಕು. ಆಶ್ರಮಶಾಲೆಗಳಲ್ಲಿ ಕೊರತೆಯಿರುವ ಶಿಕ್ಷಕರು /ಸಿಬ್ಬಂದಿಗಳನ್ನು ಪೂರೈಸಬೇಕು. ಹೊರಸಂಪನ್ಮೂಲದಿಂದ ಶಿಕ್ಷಕರನ್ನು ನೇಮಕಾತಿ**

ಮಾಡಿಕೊಂಡರೆ ಪ್ರತಿಭಾವಂತ ಶಿಕ್ಷಕರು ಸಿಗುವುದು ವಿರಳ. ಇದರಿಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಕಡಿಮೆಯಾಗುತ್ತದೆ. ಆಶ್ರಮಶಾಲೆಗಳನ್ನು ಪ್ರಾರಂಭಿಸಿದ ಮೂಲ ಉದ್ದೇಶವೇ ಅವು ಸರ್ಕಾರಿ ಶಾಲೆಗಳಿಗಿಂತ ವಿಭಿನ್ನವಾಗಿರಬೇಕು ಎಂದು, ಆ ಉದ್ದೇಶ ಪರಿಪೂರ್ಣ ಅರ್ಥವನ್ನು ಕೊಡಬೇಕು. ಆ ವಿಭಿನ್ನತೆ ಕಾಣಿಸಬೇಕು.

ಪ.ಜಾತಿಯವರಿಗೆ 1.50 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿಕೊಡಬೇಕು. 50,000 ನಿವೇಶನಗಳನ್ನು ಹಂಚಬೇಕು. ಫಲಾನುಭವಿಗಳನ್ನು ಗ್ರಾಮ ಸಭೆಗಳಿಂದ ಆಯ್ಕೆ ಮಾಡುವ ಪ್ರಕ್ರಿಯೆ ಬಗ್ಗೆ ಪರಿಶೀಲನೆ ಆಗಬೇಕು. ಅದರಿಂದ ವಿನಾಯಿತಿ ನೀಡುವ ಬಗ್ಗೆ ಚಿಂತನೆ ನಡೆಸಲಾಗುವುದು. ಪ.ಜಾತಿಯ ಮಕ್ಕಳು ಓದುತ್ತಿರುವ ಅಂಗನವಾಡಿಗಳ ಕಡೆ ಗಮನ ಹರಿಸಬೇಕು. ಅವುಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ನೀಡಲು ಆದ್ಯತೆ ನೀಡಬೇಕು.

ಎಲ್ಲಾ ಇಲಾಖೆಯವರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಾಗ ಮೇಲಿಂದ ಮೇಲೆ ಪರಿಶೀಲನೆ ಮಾಡಿ, ಸರಿಯಾಗಿ ಉಸ್ತುವಾರಿ ಮಾಡಬೇಕು. ಆಗ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಸಾಧ್ಯ. ಇನ್ನು ನಾಲ್ಕೈದು ವರ್ಷದಲ್ಲಿ ಅರ್ಹ ಫಲಾನುಭವಿಗಳಿಗೆ ಯೋಜನೆಗಳು ತಲುಪಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೆ ಅವರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲರನ್ನಾಗಿ ಮಾಡಿದರೆ, ಅವರನ್ನು ಮುಖ್ಯ ವಾಹಿನಿಗೆ ತರಲು ಸಾಧ್ಯವಾಗುತ್ತದೆ. ಇದು ನಮ್ಮ ಮೂಲ ಉದ್ದೇಶ. ಈ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದರು."

16. <u>ಅಂತಿಮವಾಗಿ ಈ ಕೆಳಕಂಡಂತೆ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು:-</u>

- 2015-16 ನೇ ಸಾಲಿನಲ್ಲಿ ಎಲ್ಲಾ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. (ಅದರ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ)

- ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ - 2013 ರ ಪ್ರಕಾರ ಕ್ರಮ ವಹಿಸುವುದು. ಮುಂದಿನ ವರ್ಷ ಕಾಯಿದೆಯ ಪ್ರಕಾರ ಆಯವ್ಯಯ ಮಂಡನೆಗೆ ಮುಂಚಿತವಾಗಿ ನೋಡಲ್ ಏಜೆನ್ಸಿ ಎಲ್ಲಾ ಇಲಾಖೆಗಳೊಂದಿಗೆ ಚರ್ಚಿಸಿ, ಪರಿಣಾಮಕಾರಿಯಾಗುವಂತಹ ಯೋಜನೆಗಳಿಗೆ ಅನುದಾನವನ್ನು ಒದಗಿಸಿ, ಕ್ರಿಯಾ ಯೋಜನೆಗಳನ್ನು ತಯಾರಿಸಿ ಇದಕ್ಕೆ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಯನ್ನು ಪಡೆಯತಕ್ಕದ್ದು.

- ಡೀಮ್ಡ್ ವೆಚ್ಚವನ್ನು ಯೋಜನಾ ವೆಚ್ಚದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿಯಲ್ಲಿ ಪ್ರತಿಶತ 5 ಕ್ಕೆ ಸೀಮಿತಗೊಳಿಸುವುದು ಹಾಗೂ ಗಿರಿಜನ ಉಪ ಯೋಜನೆಯಡಿ ಪ್ರತಿಶತ 3 ಕ್ಕೆ ಸೀಮಿತಗೊಳಿಸುವುದು

- ಎಲ್ಲಾ ಅಭಿವೃದ್ಧಿ ಇಲಾಖೆಗಳು ತಮ್ಮ ಇಲಾಖೆಗಳಿಗೆ ಒದಗಿಸಿದ ಅನುದಾನವನ್ನು ಪ್ರತಿಶತ 100 ಕ್ಕೆ 100 ರಷ್ಟು ಅದೇ ವರ್ಷದಲ್ಲಿ ಖರ್ಚು ಮಾಡತಕ್ಕದ್ದು ಯಾವುದೇ ಸಂದರ್ಭದಲ್ಲಿ ವ್ಯಪಗತವಾಗದಂತೆ ನೋಡಿಕೊಳ್ಳತಕ್ಕದ್ದು.

- ಯಾವುದೇ ಅಧಿಕಾರಿಯು ಉಪಯೋಜನೆಗಳನ್ನು ಅನುಷ್ಠಾನಗೊಳಿಸಲು ವಿಫಲವಾದರೆ, ಅವರ ವಿರುದ್ಧ ಕಾನೂನು ರೀತ್ಯ ಕಠಿಣ ಕ್ರಮ ವಹಿಸಲಾಗುವುದು.

- 2014-15 ನೇ ಸಾಲಿನಲ್ಲಿ ಉಪಯೋಜನೆಗಳಡಿಯಲ್ಲಿ ಉಳಿಕೆಯಾದ ಅನುದಾನವನ್ನು 2016-17ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ಉಪಯೋಜನೆಗಳಡಿಯಲ್ಲಿ ಸೇರಿಸತಕ್ಕದ್ದು.

- ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳ ಮೂಲಭೂತ ಸೌಕರ್ಯಗಳನ್ನು, ವಿದ್ಯಾರ್ಥಿಗಳಿಗೆ ಸವಲತ್ತುಗಳನ್ನು ಪ್ರಸಕ್ತ ಸಾಲಿನಲ್ಲಿ ಒಂದು ಕಾಲಮಿತಿಯಲ್ಲಿ ಒದಗಿಸತಕ್ಕದ್ದು. ಹಾಗೂ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು.

- ನೋಡಲ್ ಏಜೆನ್ಸಿ ಮತ್ತು ನೋಡಲ್ ಇಲಾಖಾ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಕಾಲಕಾಲಕ್ಕೆ ಯೋಜನೆಗಳ ಅನುಷ್ಠಾನದ ಬಗ್ಗೆ ಮತ್ತು ಈ ಯೋಜನೆಗಳು ಫಲಾನುಭವಿಗಳಿಗೆ ತಲುಪಿದೆ ಎಂದು ಸ್ಥಳ ಪರಿಶೀಲನೆ ಮಾಡಿ, ಖಚಿತಪಡಿಸಿಕೊಳ್ಳತಕ್ಕದ್ದು.

- ಮೇಲೆ ವಿವರಿಸಿದ ನಡವಳಿಗಳಲ್ಲಿ ವಿವಿಧ ಇಲಾಖೆಗಳಿಗೆ ನೀಡಿದ ಸೂಚನೆಗಳನ್ನು ಮತ್ತು ಸಂಬಂಧಪಟ್ಟ ವಿಷಯಗಳ ಬಗ್ಗೆ ಸಂಬಂಧಿಸಿದ ಇಲಾಖೆಗಳು ತಪ್ಪದೇ ಕ್ರಮ ಜರುಗಿಸುವುದು.

ಮಾನ್ಯ ಮುಖ್ಯಮಂತ್ರಿಗಳು ಮತ್ತೊಮ್ಮೆ ಪುನರುಚ್ಚರಿಸಿ ಪರಿಶಿಷ್ಟ ಜಾತಿ/ಪಂಗಡದ ಜನಾಂಗದವರ ಅಭಿವೃದ್ಧಿಗಾಗಿ ಈ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕೆಂದು ಒತ್ತಿ ಹೇಳಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟಂತಹ ಮಾನ್ಯ ಮುಖ್ಯಮಂತ್ರಿಯವರಿಗೂ, ಸಹ ಸಚಿವರಿಗೂ ಹಾಗೂ ಎಲ್ಲಾ ಸದಸ್ಯರುಗಳಿಗೂ ಮತ್ತು ಅಧಿಕಾರಿಗಳಿಗೂ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

(ಸಿದ್ಧರಾಮಯ್ಯ)
**ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು**
**ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತು,**

ಸಿದ್ದರಾಮಯ್ಯ
ಮುಖ್ಯಮಂತ್ರಿ